Fullerton India

# ವೈಯಕ್ತಿಕ / ವ್ಯಾವಹಾರಿಕ ಸಾಲ

# ಸಾಲದ ಒಪ್ಪಂದ

☒

ಈ ಸಾಲದ ಒಪ್ಪಂದವನ್ನು (ಒಪ್ಪಂದ) ____________________ ರಂದು ಮಾಡಲಾಗಿದೆ

ಇವರಿಂದ ಮತ್ತು ಇವರ ಮಧ್ಯೆ

ಸಾಲಗಾರ(ರ) ವಿವರಗಳು ಈ ಒಪ್ಪಂದಕ್ಕೆ ಲಗತ್ತಿಸಿರುವ ಸಾಲ ಸಾರಾಂಶ ಅನುಬಂಧದಲ್ಲಿ ಹೆಚ್ಚು ನಿರ್ದಿಷ್ಟವಾಗಿ ವಿವರಿಸಲ್ಪಟ್ಟಿವೆ. ಸಾಂದರ್ಭಿಕವಾಗಿ ಅಗತ್ಯವಾಗುವಲ್ಲಿ ಹೆಸರಿಸಿರುವ ಸಹ–ಸಾಲಗಾರರನ್ನು ಒಳಗೊಂಡಿರುತ್ತದೆ ಮತ್ತು ಇಲ್ಲಿಂದ ಮುಂದೆ ಒಟ್ಟಾಗಿ ಸಾಲಗಾರರು (ಒಂದಕ್ಕಿಂತ ಹೆಚ್ಚು ಸಾಲಗಾರರು ಇರುವಾಗ) ಎಂದು ಕರೆಯಲ್ಪಡುವ (ಅಲ್ಲಿನ ಅರ್ಥವು ಸನ್ನಿವೇಶಕ್ಕೆ ವೈರುಧ್ಯವಾಗಿ ಇಲ್ಲದೇ ಇದ್ದಲ್ಲಿ ಸಾಲಗಾರರು ವ್ಯಕ್ತಿಯಾಗಿರುವಾಗ ಅವರ ಉತ್ತರಾಕಾರಿಗಳು, ಆಸ್ತಿಪಾಸ್ತಿಗಳನ್ನು ನಿರ್ವಹಿಸುವವರು, ಆಡಳಿತಗಾರರನ್ನು, ಕಾಯ್ದೆಬದ್ಧ ಪ್ರತಿನಿಧಿಗಳು ಮತ್ತು ಅನುಮತಿಸಿರುವ ನಿಯೋಜಿತರನ್ನು ಒಳಗೊಂಡಿರುತ್ತದೆ; ಸಾಲಗಾರರು ಏಕವ್ಯಕ್ತಿ ವ್ಯಾಪಾರಿ ಸಂಸ್ಥೆಯಾಗಿರುವಾಗ ಅವರ ಉತ್ತರಾಕಾರಿಗಳು, ಆಸ್ತಿಪಾಸ್ತಿಗಳನ್ನು ನಿರ್ವಹಿಸುವವರು, ಆಡಳಿತಗಾರರನ್ನು, ಕಾಯ್ದೆಬದ್ಧ ಪ್ರತಿನಿಧಿಗಳು ಮತ್ತು ಅನುಮತಿಸಿರುವ ನಿಯೋಜಿತರನ್ನು ಒಳಗೊಂಡಿರುತ್ತದೆ; ಪಾಲುದಾರಿಕೆ ಸಂಸ್ಥೆಯಾಗಿರುವಾಗ ಹೇಳಿರುವ ಪಾಲುದಾರಿಕೆ ಸಂಸ್ಥೆ, ಬದುಕಿರುವ ಪಾಲುದಾರ ಮತ್ತು ಪಾಲುದಾರರ ಉತ್ತರಾಧಿಕಾರಿಗಳು,ಆಸ್ತಿಪಾಸ್ತಿಗಳನ್ನು ನಿರ್ವಹಿಸುವವರು, ಆಡಳಿತಗಾರರನ್ನು ಒಳಗೊಂಡಿರುತ್ತದೆ; ಸಾಲಗಾರರು ಹಿಂದೂ ಅವಿಭಕ್ತ ಕುಟುಂಬದ ಕರ್ತಾ ಆಗಿದ್ದರೆ ಹೇಳಿರುವ ಅವಿಭಕ್ತ ಕುಟುಂಬದ ಸದಸ್ಯರು ಹಾಗೂ ಅವರ ಉತ್ತರಾಕಾರಿಗಳು, ಆಸ್ತಿಪಾಸ್ತಿಗಳನ್ನು ನಿರ್ವಹಿಸುವವರು, ಆಡಳಿತಗಾರರನ್ನು, ನಿಯೋಜಿತರನ್ನು ಒಳಗೊಂಡಿರುತ್ತದೆ; ಪಾಲುದಾರರು ಕಂಪನಿಯಾಗಿದ್ದಲ್ಲಿ ಇದರ ಉತ್ತರಾಕಾರಿಗಳು ಮತ್ತು ನಿಯೋಜಿತರು; ಸಾಲಗಾರರು ಇನ್‌ಕಾರ್ಪೊರೇಟ್ ಆಗಿಲ್ಲದ ಸಂಸ್ಥೆಯಾಗಿದ್ದರೆ ಅಂತಹ ಸಂಸ್ಥೆಯ ಎಲ್ಲ ಸದಸ್ಯರು ಹಾಗೂ ಅವರ ಉತ್ತರಾಕಾರಿಗಳು; ಸಾಲಗಾರರು ಸೊಸೈಟಿ ಆಗಿರುವಾಗ ಆಡಳಿತ ಸಂಸ್ಥೆ ಮತ್ತು ಆಡಳಿತ ಸಂಸ್ಥೆಯ ಸಂಬಂಧಿಸಿದ ಸದಸ್ಯರು ಮತ್ತು ಆಯ್ಕೆ ಮಾಡಲಾಗಿರುವ ಯಾವುದೇ ಸದಸ್ಯರು, ನೇಮಕಗೊಂಡವರು; ಸಾಲಗಾರರು ಟ್ರಸ್ಟ್ ಆಗಿದ್ದರೆ ಟ್ರಸ್ಟಿಗಳು ಹಾಗೂ ಉತ್ತರಾಕಾರಿಗಳು ಮತ್ತು ಸಾಲಗಾರರು ಸೀಮಿತ ಹೊಣೆಗಾರಿಕೆಯ ಪಾಲುದಾರಿಕೆ ಆಗಿರುವಾಗ ಸೀಮಿತ ಹೊಣೆಗಾರಿಕೆಯ ಪಾಲುದಾರಿಕೆಯಲ್ಲಿರುವ ಪಾಲುದಾರ ಅಥವಾ ಪಾಲುದಾರರು ಅಥವಾ ಅವರ ಉತ್ತರಾಕಾರಿಗಳು, ಆಸ್ತಿಪಾಸ್ತಿ ನಿರ್ವಹಿಸುವವರು ಮತ್ತು ಆಡಳಿತಗಾರರು ಮತ್ತು ಅಂತಹ ಸಂಸ್ಥೆಯ ಪಾಲುದಾರರ ಉತ್ತರಾಧಿಕಾರಿಗಳು ಹಾಗೂ ನಿಯೋಜಿತರು ಒಳಗೊಂಡಿರುತ್ತದೆ) ಇವರು ಒಂದು ಪಕ್ಷವಾಗಿದ್ದರೆ,

ಹಾಗೂ

1956ರ ಕಂಪನಿಗಳ ಕಾಯ್ದೆ ಅಡಿ ನೋಂದಣಿಯಾಗಿರುವ ಫುಲ್ಲರ್‌ಟನ್ ಇಂಡಿಯಾ ಕ್ರೆಡಿಟ್ ಕಂಪನಿ ಲಿಮಿಟೆಡ್ ಕಚೇರಿ ವಿಳಾಸ: ಮೇಫ್ ಟವರ್ಸ್, ಮೂರನೇ ಮಹಡಿ, ಹಳೆಯ ಸಂಖ್ಯೆ 307, ಹೊಸ ಸಂಖ್ಯೆ 165, ಪೂಣಮಲ್ಲೆ ಹೈ ರೋಡ್, ಮದುರವೋಯಲ್ ಚೆನ್ನೈ–600095, ತಮಿಳುನಾಡು. ಇದರ ಶಾಖಾ ಕಚೇರಿಯು ಸಾಲ ಸಾರಾಂಶ ಅನುಬಂಧದ ಮತ್ತೊಂದು ಭಾಗದಲ್ಲಿ ಸೂಚಿಸಿರುವ ಸ್ಥಳದಲ್ಲಿ ಇದೆ. (ಇದನ್ನು ಎಫ್‌ಐಸಿಸಿಎಲ್ ಎಂದು ಸೂಚಿಸಲಾಗಿದೆ). ಇದು ಇನ್ನೊಂದು ಪಕ್ಷ.

ಯಾವುದೇ ಲಿಂಗದ ಉಲ್ಲೇಖವು ಎಲ್ಲ ಲಿಂಗಗಳನ್ನು ಒಳಗೊಂಡಿರುತ್ತದೆ. ಅಲ್ಲದೇ ಏಕ ಸಂಖ್ಯೆಯ ಉಲ್ಲೇಖವು ಬಹುಸಂಖ್ಯೆಯ ಉಲ್ಲೇಖವನ್ನು ಒಳಗೊಂಡಿರುತ್ತದೆ. ಅದೇ ರೀತಿ ಬಹುಸಂಖ್ಯೆಯ ಉಲ್ಲೇಖವು ಏಕ ಸಂಖ್ಯೆಯನ್ನು ಒಳಗೊಂಡಿರುತ್ತದೆ. ಒಪ್ಪಂದ ಎಂದರೆ, ಈ ಸಾಲ ಒಪ್ಪಂದ, ಸಾಲದ ಸಾರಾಂಶ ಅನುಬಂಧಗಳು, ಇದಕ್ಕೆ ಲಗತ್ತಿಸಿದ ಶುಲ್ಕದ ಪಟ್ಟಿ ಹಾಗೂ ಯಾವುದೇ ಪೂರಕ ಅನುಬಂಧಗಳು, ಮರುಪಾವತಿ ಅನುಬಂಧಗಳು, ಈಗ ಲಗತ್ತಿಸಿದ ಅನುಬಂಧ ಅಥವಾ ನಂತರ ಈ ಒಪ್ಪಂದದ ಸ್ವರೂಪದ ಭಾಗವಾಗಿ ಮತ್ತು ಈ ಒಪ್ಪಂದಕ್ಕೆ ಕಾಲ ಕಾಲಕ್ಕೆ ಪ್ರಸ್ತುತ ಮತ್ತು ನಂತರ ದಾಖಲಿಸಿದ ಯಾವುದೇ ಅನುಬಂಧ, ದಾಖಲೆ ಅಥವಾ ಲಗತ್ತಿಸಿದ ಇತರ ಪೂರಕ ದಾಖಲೆಗಳು ಎಂದರ್ಥ.

ಸಾಲಗಾರ (ರು) ವೃತ್ತಿ/ಖಾಸಗಿ/ವ್ಯವಹಾರ ಅಗತ್ಯಗಳಿಗೆ ಸಾಲ ನೀಡುವಂತೆ ಎಫ್‌ಐಸಿಸಿಎಲ್‌ಗೆ ಮನವಿ ಮಾಡಿಕೊಂಡಿದ್ದಾನೆ. ಅಲ್ಲದೇ ಸಾಲಗಾರ (ರ) ಮನವಿ ಮೇರೆಗೆ ಎಫ್‌ಐಸಿಸಿಎಲ್ ಇಲ್ಲಿ ಹೇಳಿರುವಂತೆ ಪರಸ್ಪರ ಒಪ್ಪಿತ ನಿಯಮಗಳು ಹಾಗೂ ಷರತ್ತುಗಳ ಮೇಲೆ ಸಾಲ ನೀಡಲು (ಇಲ್ಲಿ ಹಾಗೂ ನಂತರ ವ್ಯಾಖ್ಯಾನಿಸಿದಂತೆ) ಒಪ್ಪಿಕೊಂಡಿದೆ.

ಈ ಮೂಲಕ ಪಕ್ಷಗಳ ನಡುವೆ ಈ ಕೆಳಗಿನಂತೆ ಒಪ್ಪಂದಾಗಿದೆ:–

1. ಸಾಲ, ಬಟವಾಡೆ, ಬಡ್ಡಿ ಹಾಗೂ ಮರುಪಾವತಿಗಳು

1.1 ಇಲ್ಲಿ ಇರುವ ನಿಯಮಗಳು ಹಾಗೂ ಷರತ್ತುಗಳಿಗೆ ಒಳಪಟ್ಟು, ಸಾಲಗಾರ (ರು) ಎಫ್‌ಐಸಿಸಿಎಲ್ ನಿಂದ ಸಾಲ ಪಡೆಯಲು ಒಪ್ಪತ್ತಾನೆ ಮತ್ತು ಸಾಲ ಸಾರಾಂಶ ಅನುಬಂಧದಲ್ಲಿ ನಿರ್ದಿಷ್ಟಪಡಿಸಿದ ಮೊತ್ತವನ್ನು( ಇಲ್ಲಿ ಹಾಗೂ ನಂತರ ಸಾಲ ಎಂದು ಉಲ್ಲೇಖಿಸಲಾದ ಮೊತ್ತ) ಎಫ್‌ಐಸಿಸಿಎಲ್ ಸಾಲಗಾರ (ರಿಗೆ)ನಿಗೆ ನೀಡಲು ಒಪ್ಪುತ್ತದೆ. ಸಾಲವನ್ನು ಪೂರ್ಣವಾಗಿ ಅಥವಾ ಕಂತುಗಳಲ್ಲಿ ಅಥವಾ ಎಫ್‌ಐಸಿಸಿಎಲ್ ನಿರ್ಧರಿಸಿದಂತೆ ಇಂತಹ ಇತರ ವಿಧಾನಗಳಲ್ಲಿ ಬಟವಾಡೆ ಮಾಡಬಹುದು. ಸಾಲಗಾರ (ರು) ನಿಯೋಜಿಸಬಹುದಾದಂತೆ ಸಾಲವನ್ನು/ಇಂತಹ ಇತರ ವ್ಯಕ್ತಿಗಳಿಗೆ ಬಟವಾಡೆ ಮಾಡಬಹುದು; ಈ ಮೇಲೆ ಹೇಳಿದ ನಿಯೋಜಿತ ವ್ಯಕ್ತಿಗಳಿಗೆ ಎಫ್‌ಐಸಿಸಿಎಲ್ ಸಾಲ ನೀಡಿದರೆ ಸಾಲಕ್ಕೆ ಸಂಬಂಸಿದ ಸಾಲಗಾರನ (ರ) ಬಾಧ್ಯತೆಯ ಮೇಲೆ ಇದು ಪರಿಣಾಮ ಬೀರುವುದಿಲ್ಲ,

1.2 ಸಾಲದ ಮೊತ್ತದ ಮೇಲಿನ ಬಡ್ಡಿಯನ್ನು ಸಾಲಗಾರ (ರು) ಸಾಲ ಸಾರಾಂಶ ಅನುಬಂಧದಲ್ಲಿ ನಿರ್ದಿಷ್ಟಪಡಿಸಿದ ದರದಲ್ಲಿ ಪಾವತಿ ಮಾಡುತ್ತಾನೆ. ಬಾಕಿ ಇರುವ ಅಸಲು ಮೊತ್ತದ ಉಳಿಕೆಯೊಂದಿಗೆ

ಸಾಲಗಾರ(ರ) ☒ | ಸಹ ಸಾಲಗಾರ(ರ) ☒ | ಎಫ್‌ಐಸಿಸಿಎಲ್ ಪರವಾಗಿ ಅಧಿಕೃತ ಸಹಿದಾರ

ಬಡ್ಡಿಯನ್ನು ದಿನದ ಆಧಾರದಲ್ಲಿ ಲೆಕ್ಕ ಹಾಕಲಾಗುತ್ತದೆ. ಚೆಕ್ ನೀಡಿದ ದಿನ/ಸಂಗ್ರಹಿಸಿದ ದಿನ/ಚೆಕ್ ತೀರುವಳಿ ದಿನ ಮತ್ತು/ಅಥವಾ ಸಾಲಗಾರ (ರು) ಹಾಗೂ ಬ್ಯಾಂಕ್ ನ ಬೇರೆ ಯಾವುದೇ ಕಾರಣಗಳನ್ನು ಪರಿಗಣಿಸದೇ ಒಪ್ಪಂದ ದಿನಾಂಕದಿಂದ ಬಡ್ಡಿ ಶುರುವಾಗುತ್ತದೆ.

1.3 ಸಾಲದ ಸಾರಾಂಶ ಅನುಬಂಧದಲ್ಲಿ ನಿರ್ದಿಷ್ಟಪಡಿಸಿದಂತೆ ಸಾಲಗಾರ(ರು) ವಾಯಿದೆ ದಿನಾಂಕಗಳಂದು ಮಾಸಿಕ ಕಂತುಗಳ ಬಡ್ಡಿಯೊಂದಿಗೆ ಸಾಲವನ್ನು ಮರುಪಾವತಿಸಬೇಕು/ಪಾವತಿಸಬೇಕು.

1.4 ಸಾಲ ಸಾರಾಂಶ ಅನುಬಂಧ, ಶುಲ್ಕಗಳ ಪಟ್ಟಿಗಳು ಹಾಗೂ ಎಫ್ಐಸಿಸಿಎಲ್ ವೆಬ್ ಸೈಟ್ ನಲ್ಲಿ(http://www.fullertonindia.com/ about&us/loan&charges.aspx) ನಿರ್ದಿಷ್ಟಪಡಿಸಿದಂತೆ ಸಾಲಗಾರ(ರು) ಎಫ್ಐಸಿಸಿಎಲ್ ಶುಲ್ಕಗಳು ಹಾಗೂ ಬೆಲೆಗಳನ್ನು ಹೊರಬೇಕು ಮತ್ತು ಪಾವತಿಸಬೇಕು. ಇದರಲ್ಲಿ ದಾಖಲೀಕರಣ ಹಾಗೂ ಪ್ರಾಸೆಸಿಂಗ್ ಶುಲ್ಕಗಳು (ಮರುಪಾವತಿ ಸಾಧ್ಯವಿಲ್ಲ), ಇಎಂಐ ಪೂರ್ವ ಬಡ್ಡಿ(ಅನ್ವಯವಾದಲ್ಲಿ), ಚೆಕ್ ವಾಪಸಾತಿ ಶುಲ್ಕಗಳು, ಚೆಕ್/ಇಸಿಎಸ್ ವಿನಿಮಯ ಶುಲ್ಕಗಳು, ಹೆಚ್ಚುವರಿಬಡ್ಡಿ, ಮರುಪಾವತಿ/ಅಡಮಾನದ ಆಸ್ತಿ ಮಾರಾಟ ಶುಲ್ಕಗಳು ಮತ್ತು ಕಾಲದಿಂದ ಕಾಲಕ್ಕೆ ಎಫ್ಐಸಿಸಿಎಲ್ ಆಂತರಿಕ ನೀತಿಗಳ ಪ್ರಕಾರ ಅನ್ವಯವಾಗುವಂತೆ ಪಾವತಿಸುವ ಯಾವುದೇ ಶುಲ್ಕಗಳು ಅಥವಾ ದರಗಳು, ಶಾಸನಬದ್ಧ ಶುಲ್ಕಗಳು ಇರುತ್ತವೆ, ಆದರೆ ಇದಕ್ಕೆ ಸೀಮಿತವಾಗಿರುವುದಿಲ್ಲ. ಎಫ್ಐಸಿಸಿಎಲ್ ಈ ಮೇಲಿನ ಶುಲ್ಕ/ಬೆಲೆಗಳನ್ನು ಸಾಲಗಾರ (ರ)ನ ಗಮನಕ್ಕೆ ತರದೇ ಪರಿಷ್ಕರಿಸುವ ಅಕಾರ ಹೊಂದಿರುತ್ತದೆ. ಈ ಮೇಲಿನ ಶುಲ್ಕಗಳ ಜತೆಗೆ ಸಾಲಗಾರ (ರು) ಎಫ್ಐಸಿಸಿಎಲ್ ಗೆ ಬಡ್ಡಿ ತೆರಿಗೆಗೆ ಸಂಬಂಸಿದ ಎಲ್ಲ ಶುಲ್ಕಗಳು, ಸೇವಾ ತೆರಿಗೆ, ಕರಗಳು (ಸ್ಟಾಂಪ್ ಡ್ಯೂಟಿ ಸೇರಿಸಿ), ತೆರಿಗೆಗಳನ್ನು (ಸರ್ಕಾರ ಅಥವಾ ಇತರ ಪ್ರಾಕಾರದಿಂದ ಕಾಲಕಾಲಕ್ಕೆ ವಿಧಿಸಲ್ಪಡಬಹುದಾದಂತೆ ಯಾವುದೇ ಆದೇಶ) ಪಾವತಿ ಮಾಡಬೇಕು ಹಾಗೂ ತುಂಬಿಕೊಡಬೇಕು.

1.5 ಸಾಲದ ಅಡಿಯಲ್ಲಿ ಸಾಲಗಾರನು ಎಫ್ಐಸಿಸಿಎಲ್ ಗೆ ಬಾಕಿ ಮೊತ್ತಕ್ಕಿಂತ ಅಕ ಮೊತ್ತ ಸಂದಾಯ/ಪಾವತಿ ಮಾಡಿದಲ್ಲಿ, ಇಂತಹ ಹೆಚ್ಚುವರಿ ಮೊತ್ತವನ್ನು ಮರುಪಾಪತಿ ಮಾಡಲು ತಾನು ಕಾಲ ಕಾಲಕ್ಕೆ ನಿರ್ಧರಿಸಬಹುದಾದಂತೆ ಪ್ರಾಸೆಸಿಂಗ್ ಶುಲ್ಕ ವಿಸುವ ಹಕ್ಕುಗಳನ್ನು ಎಫ್ಐಸಿಸಿಎಲ್ ಕಾದಿರಿಸುತ್ತದೆ.

1.6 ಸಾಲಕ್ಕೆ ಸಂಬಂಧಿಸಿದ ಇಎಂಐ ಪೂರ್ವ ಬಡ್ಡಿ, ಮುಂಗಡ ಕಂತುಗಳು, ವಿಮಾ ಕಂತು, ದಾಖಲೀಕರಣ ಶುಲ್ಕಗಳು, ವ್ಯವಹಾರ/ಪ್ರಾಸೆಸಿಂಗ್ ಶುಲ್ಕಗಳು ಮತ್ತು/ಅಥವಾ ಇತರ ಶುಲ್ಕಗಳನ್ನು ಸಾಲದಿಂದ ಕಡಿತ ಮಾಡಲಾಗುತ್ತದೆ. ಇಂತಹ ಶುಲ್ಕಗಳು ಹಾಗೂ/ ಅಥವಾ ದರಗಳನ್ನು ಕಡಿತ ಮಾಡಿದ ಬಳಿಕವೇ ನಿವ್ವಳ ಮೊತ್ತವನ್ನು ಸಾಲಗಾರನಿಗೆ (ರಿಗೆ) ವಿತರಣೆ ಮಾಡಲಾಗುತ್ತದೆ.

1.7 ಸಾಲ ಮರುಪಾವತಿ ಅವಧಿ ಇದ್ದಾಗ್ಯೂ ಬೇಡಿಕೆ ಹಾಗೂ ಸಂದರ್ಭಾನುಸಾರ ಸಾಲನ್ನು ಕೂಡಲೇ ಮರುಪಾವತಿ ಮಾಡಬೇಕು. ಸಾಲಕ್ಕೆ ಸಂಬಂಧಿಸಿದ ಬಡ್ಡಿ ಸೇರಿದಂತೆ ಎಲ್ಲ ಬಾಕಿಯೊಂದಿಗೆ ಸಲ್ಲಿಕೆಯಾಗಬೇಕಾದ ಪೂರ್ಣ ಮೊತ್ತವನ್ನು ಬೇಡಿಕೆ ಮೇಲೆ ಕೂಡಲೇ ಪಾವತಿಸಿಕೊಳ್ಳುವ ಹಕ್ಕನ್ನು ಎಫ್ಐಸಿಸಿಎಲ್ ಹೊಂದಿರುತ್ತದೆ.

1.8 ಸಾಲ ಮರುಪಾವತಿಗೆ ಮುಂದಿನ ದಿನಾಂಕದ ಚೆಕ್ಕುಗಳು (ಪಿಡಿಸಿ)/ಇಸಿಎಸ್ ನೀಡಲು ಸಾಲಗಾರ(ರು) ಒಪ್ಪಿಕೊಳ್ಳುತ್ತಾನೆ. ಎಫ್ಐಸಿಸಿಎಲ್ ಪರವಾಗಿ ನೀಡಿದ ಪಿಡಿಸಿಗಳ ಜತೆಗೆ ಇಸಿಎಸ್ ಮಾದರಿ ಪಾವತಿಯನ್ನು ಸಾಲಗಾರ(ರು) ಅಂಗೀಕರಿಸುತ್ತಾನೆ.

1.9 ಸಾಲವನ್ನು (ಅಥವಾ ಈಗ ತಾನೆ ಉಲ್ಲೇಖಿಸಿದ ಸಂಗತಿ) ಸಾಲದ ಅರ್ಜಿಯಲ್ಲಿ ಹೇಳಿದ ಕಾರಣವನ್ನು ಬಿಟ್ಟು ಬೇರೆ ಯಾವುದೇ ಉದ್ದೇಶಕ್ಕೆ ಬಳಸುವುದಿಲ್ಲ, ಅಥವಾ ಯಾವುದೇ ಅಸುರಕ್ಷಿತ, ಸೂಕ್ತವಲ್ಲದ ಅಥವಾ ಅಕ್ರಮ ಅಥವಾ ಕಾನೂನುಬಾಹಿರ ಉದ್ದೇಶಗಳು/ಚಟುವಟಿಕೆಗಳಿಗೆ ಬಳಸುವುದಿಲ್ಲ ಎಂದು ಸಾಲಗಾರ (ರು) ದೃಢಪಡಿಸುತ್ತಾನೆ.

1.10 ಇಬ್ಬರು ಅಥವಾ ಹೆಚ್ಚಿನ ಸಾಲಗಾರ (ರು) ಇದ್ದ ಸಂದರ್ಭದಲ್ಲಿ, ಸಾಲವನ್ನು ಮರುಪಾವತಿ ಮಾಡುವ ಹಾಗೂ ಈ ಒಪ್ಪಂದದ ಅಡಿ ಬಾಧ್ಯತೆಗಳನ್ನು ಪೂರೈಸುವ ಹೊಣೆಗಾರಿಕೆಯು ಜಂಟಿ ಹಾಗೂ ಬಹುವಾಗಿರುತ್ತದೆ ಮತ್ತು ಒಂದೇ ತೆರನಾಗಿರುತ್ತದೆ ಎಂದು ಈ ಮೂಲಕ ಒಪ್ಪಿಕೊಳ್ಳಲಾಗಿದೆ.

1.11 ಈ ಒಪ್ಪಂದದ ಅಡಿ ಎಫ್ಐಸಿಸಿಎಲ್‌ಗೆ ಸಾಲಗಾರ(ರು) ಮಾಡುವ ಎಲ್ಲ ಪಾವತಿಗಳು ಮುಕ್ತ ಹಾಗೂ ಸ್ಪಷ್ಟವಾಗಿರಬೇಕು ಮತ್ತು ಯಾವುದೇ ತೆರಿಗೆ ಕಡಿತರಹಿತವಾಗಿರಬೇಕು. ಒಂದು ವೇಳೆ ಸಾಲಗಾರ(ರು) ಇಂತಹ ಕಡಿತ ಮಾಡಬೇಕಾಗಿ ಬಂದಲ್ಲಿ, ಎಫ್ಐಸಿಸಿಎಲ್ ಇಂತಹ ಕಡಿತ ಇಲ್ಲದೆಯೇ ಪಡೆದುಕೊಳ್ಳುತ್ತಿದ್ದ ಮೊತ್ತಕ್ಕೆ ಸಮನಾದ ಹಣವನ್ನು ಪಡೆದುಕೊಳ್ಳುತ್ತದೆ ಮತ್ತು ಉಳಿಸಿಕೊಳ್ಳುತ್ತದೆ (ಇಂತಹ ಕಡಿತಕ್ಕೆ ಯಾವುದೇ ಹೊಣೆಗಾರಿಕೆ ಇಲ್ಲದೇ). ಸೇವಾ ತೆರಿಗೆಗಳು ಅಥವಾ ಇತರ ಶಾಸನಬದ್ಧ ಲೆವಿಗಳು ಇದ್ದಲ್ಲಿ ಅದನ್ನು ಸಾಲಗಾರನಿಗೆ(ರಿಗೆ) ವಿಧಿಸಲಾಗುತ್ತದೆ ಮತ್ತು ಅವರು ಅದನ್ನು ಪಾವತಿ ಮಾಡುತ್ತಾರೆ.

1.12 ಈ ಕೆಳಗೆ ಬಾಕಿ ಇರುವ ಇಎಂಐ ಪಾವತಿ ಮಾಡಲು ಸಾಲಗಾರ(ರು) ತಪ್ಪಿದಲ್ಲಿ ಇಂತಹ ಬೇಪಾವತಿ ದಿನಾಂಕದಂದು ಸಾಲದ ಅಡಿಯಲ್ಲಿ ಬಾಕಿ ಇರುವ ಅಸಲು ಮೊತ್ತಗಳ ಮೇಲೆ ಸಾಲ ಸಾರಾಂಶ ಅನುಬಂಧದಲ್ಲಿ ನಿರ್ದಿಷ್ಟಪಡಿಸಿದ ದರದಲ್ಲಿ ಹೆಚ್ಚುವರಿ ಬಡ್ಡಿ ಕಟ್ಟಬೇಕು. ಇದರ ಜತೆ ಮಾಸಿಕ ಉಳಿಕೆ ಅಥವಾ ಬೇಪಾವತಿ ದಿನಾಂಕದಿಂದ ಬಾಕಿ ಇರುವ ಎಲ್ಲ ಮೊತ್ತದ ಪಾವತಿ ದಿನಾಂಕದ ವರೆಗೆ ಎಫ್ಐಸಿಸಿಎಲ್ ಕಾಲಕಾಲಕ್ಕೆ ಲಿಖಿತ ನೋಟಿಸ್ ನೀಡಿದಂತೆ ಇಂತಹ ಅವಗಳ ಬಾಕಿ ಸೇರುತ್ತದೆ. ಈ ಒಪ್ಪಂದದ ಅಡಿಯಲ್ಲಿ ಸಾಲಗಾರನ(ರ) ಬಾಧ್ಯತೆಗಳನ್ನು ಹೆಚ್ಚುವರಿ ಬಡ್ಡಿ ಪಾವತಿಯು ಮುಕ್ತಗೊಳಿಸುವುದಿಲ್ಲ. ಇಲ್ಲಿ ಏನೇ ಅಡಕವಾಗಿದ್ದರೂ, ಸಾಲಗಾರ (ರಿಂದ) ನಿಂದ ಯಾವುದೇ ಬೇಪಾವತಿಯ ಮೇಲೆ ಅದಕ್ಕೆ ಸಲ್ಲಬಹುದಾದ ಇತರ ಎಲ್ಲ ಹಕ್ಕುಗಳನ್ನು ಎಫ್ಐಸಿಸಿಎಲ್ ಸ್ಪಷ್ಟವಾಗಿ ಕಾದಿರಿಸುತ್ತದೆ.

1.13 ಸಾಲಗಾರ(ರು) 21 ದಿನಗಳ ಮೊದಲು ಎಫ್ಐಸಿಸಿಎಲ್‌ಗೆ ಲಿಖಿತ ನೋಟಿಸ್ ನೀಡುವ ಮೂಲಕ ಯಾವುದೇ ಸಮಯದಲ್ಲಿ ಬಾಕಿ ಬಡ್ಡಿ ಮೊತ್ತದೊಂದಿಗೆ ಸಂಪೂರ್ಣ ಸಾಲವನ್ನು ಒಟ್ಟಿಗೆ ಪೂರ್ವ ಪಾವತಿ ಮಾಡಬಹುದು. ಇಂತಹ ಸಂದರ್ಭದಲ್ಲಿ ಸಾಲಗಾರ(ರು) ತನ್ನ ಪೂರ್ವಪಾವತಿ ಹಕ್ಕುಗಳನ್ನು ಚಲಾಯಿಸುತ್ತಾನೆ. ಸಾಲ ಸಾರಾಂಶ ಅನುಬಂಧದಲ್ಲಿ ನಿರ್ದಿಷ್ಟಪಡಿಸಿದ ದರದಲ್ಲಿ ಪೂರ್ವಪಾವತಿ ಶುಲ್ಕಗಳನ್ನು ವಿಧಿಸುವ ಅಕಾರ ಎಫ್ಐಸಿಸಿಎಲ್‌ಗೆ ಇರುತ್ತದೆ. ಸಾಲದ ಭಾಗಶಃ ಪೂರ್ವಪಾವತಿಗೆ ಅವಕಾಶವಿಲ್ಲ.

1.14 ಕಂತುಗಳನ್ನು ಮುಂಗಡವಾಗಿ ಪಾವತಿ ಮಾಡುವ ಅಕಾರ ಸಾಲಗಾರ(ರಿಗೆ)ನಿಗೆ ಇರುತ್ತದೆ; ಆದರೆ ಮುಂಗಡ ಪಾವತಿ ಮಾಡಿದ ಕಂತುಗಳ ಮೇಲೆ ಬಡ್ಡಿ ನೀಡುವ ಹೊಣೆಗಾರಿಕೆ ಎಫ್ಐಸಿಸಿಎಲ್‌ಗೆ ಇರುವುದಿಲ್ಲ.

1.15 ಸಾಲಕ್ಕೆ ಸಂಬಂಧಿಸಿದ ಅರ್ಜಿ ಮತ್ತು/ಅಥವಾ ದಾಖಲೀಕರಣದ ವೇಳೆ ಸಾಲಗಾರ(ರು) ಸಾಲಕೊಡುವವನಿಗೆ ಪಾವತಿಸುವ ಎಲ್ಲ ಶುಲ್ಕಗಳು, ಬೆಲೆಗಳು ಇತ್ಯಾದಿಯ ಬಗ್ಗೆ ಅರಿವಿದೆ ಹಾಗೂ ಇದನ್ನು ಒಪ್ಪಿಕೊಳ್ಳಲಾಗುತ್ತದೆ ಎಂದು ಸಾಲಗಾರ(ರು) ಈ ಮೂಲಕ ದೃಢಪಡಿಸುತ್ತಾನೆ. ಇವೆಲ್ಲ ಸಾಲಕ್ಕೆ ಸಂಬಂಧಿಸಿ ಸಾಲಗಾರ(ರು) ಭರಿಸಬೇಕಾದ ಏಕಕಾಲದ ಬೆಲೆಗಳು ಹಾಗೂ/ಅಥವಾ ಖರ್ಚುಗಳು. ಇವು ಸಾಲಕ್ಕೆ ಸಂಬಂಧಿಸಿದಂತೆ ಮೂಲ, ರುಜುವಾತು ಹಾಗೂ ಕಾನೂನು ಖರ್ಚುಗಳಿಗೆ ಸೀಮಿತವಾಗುವುದಿಲ್ಲ.

1.16 ಈ ಒಪ್ಪಂದದಲ್ಲಿರುವ ಕಲಂ ಸಂಖ್ಯೆ 1 ಅಥವಾ ಯಾವುದ ಇತರ ಕಲಂ ಅಡಿಯಲ್ಲಿ ಕಟ್ಟಬೇಕಾಗಿರುವ ಯಾವುದೇ ಶುಲ್ಕಗಳು ಮನ್ನಾ ಆಗುವುದು ಸಂಪೂರ್ಣವಾಗಿ ಎಫ್ಐಸಿಸಿಎಲ್ ನಿರ್ಧಾರಕ್ಕೆ ಬಿಟ್ಟ ವಿಚಾರ. ಅಲ್ಲದೇ ಎಫ್ಐಸಿಸಿಎಲ್ ನಿರ್ಧಾರವೇ ಅಂತಿಮ. ಜತೆಗೆ ಸಾಲಗಾರನಿಂದ ಯಾವುದೇ ಅವಲಂಬನೆ ಇರುವುದಿಲ್ಲ.

## 2. ಬೇಪಾವತಿ ಸಂದರ್ಭ ಮತ್ತು ಬೇಪಾವತಿ ಪರಿಣಾಮಗಳು

2.1 (ಎ) ಸಾಲಕ್ಕೆ ಸಂಬಂಧಿಸಿ ಸಾಲಗಾರ(ರು) ಈ ಒಪ್ಪಂದದ ಯಾವುದೇ ಇತರ ಷರತ್ತುಗಳನ್ನು ಪಾಲಿಸದಿದ್ದಲ್ಲಿ; ಅಥವಾ (ಬಿ) ವಾಯಿದೆ ದಿನಾಂಕ ಹಾಗೂ ಅದಕ್ಕೆ ಮುನ್ನ ಯಾವುದೇ ಕಂತುಗಳನ್ನು ಪಾವತಿ/ಮರುಪಾವತಿ ಮಾಡಲು ಅಥವಾ ಬೇರೆ ಯಾವುದೇ ಪಾವತಿಗಳನ್ನು ಮಾಡಲು ತಪ್ಪಿದಲ್ಲಿ; ಅಥವಾ (ಸಿ) ಎಫ್ಐಸಿಸಿಎಲ್ ಅಥವಾ ಇತರ ಬ್ಯಾಂಕ್ ಹಾಗೂ ಹಣಕಾಸು ಸಂಸ್ಥೆ ಜತೆ ಮಾಡಿಕೊಂಡ ಒಪ್ಪಂದದ ಅಡಿ ಸಾಲಗಾರ(ರು) ಯಾವುದೇ ಬೇಪಾವತಿ ಮಾಡಿದಲ್ಲಿ ಅಥವಾ (ಡಿ) ಎಫ್ಐಸಿಸಿಎಲ್‌ಗೆ ಸಾಲಗಾರ(ರು) ಯಾವುದೇ ತಪ್ಪು ಹೇಳಿಕೆ ನೀಡಿದ್ದು ಕಂಡುಬಂದಲ್ಲಿ ಅಥವಾ (ಇ) ದಿವಾಳಿ ಅಥವಾ ಸಾಲಗೇಡಿ ಎಂದು ಘೋಷಿಸಲ್ಪಟ್ಟಲ್ಲಿ ಅಥವಾ ಸಾಲಗಾರ(ರ)ನ ಯಾವುದೇ ಸ್ವತ್ತು ಅಥವಾ ಸ್ಥಿರಾಸ್ತಿಗೆ ಸಂಬಂಧಿಸಿ ನೇಮಕಗೊಂಡ ಸಮಾಪಕ, ಸ್ವೀಕರಿಸುವ ವ್ಯಕ್ತಿ ಅಥವಾ ಅಕಾರಿ ಅಥವಾ ಸಾಲಗಾರ(ರು) ತನ್ನನ್ನು ದಿವಾಳಿ ಎಂದು ಘೋಷಿಸುವುದಕ್ಕೆ ಯಾವುದೇ ಅರ್ಜಿ ಸಲ್ಲಿಸಿದಲ್ಲಿ ಅಥವಾ ಸಾಲಗಾರ(ರನ್ನು) ನನ್ನು ದಿವಾಳಿ ಎಂದು ಘೋಷಿಸುವುದಕ್ಕೆ ಯಾವುದೇ ಅರ್ಜಿ ಹಾಕಿದಲ್ಲಿ ಅಥವಾ ಸಾಲಗಾರ(ರನ್ನು) ದಿವಾಳಿ ಎಂದು ಘೋಷಿಸಲು ಯಾವುದೇ ಸೂಕ್ತ ನ್ಯಾಯಾಲಯ ಅಥವಾ ಪ್ರಾಕಾರ ಯಾವುದೇ ಆದೇಶ ಅಂಗೀಕರಿಸಿದಲ್ಲಿ; ಅಥವಾ (ಎಫ್) ಸಾಲಗಾರ(ರು) ಅಥವಾ ಯಾವುದೇ ಪಾಲುದಾರ ಅಥವಾ ಸಾಲಗಾರ(ರ)ನ ನಿರ್ದೇಶಕ ಘೋಷಿತ ವೃತ್ತಿ/ವ್ಯವಹಾರ ನಡೆಸುವುದನ್ನು ನಿಲ್ಲಿಸಿದಲ್ಲಿ; ಅಥವಾ (ಜಿ) ಸಾಲಗಾರನ(ರ) ಸ್ಥಾನಮಾನ ಅಥವಾ ವ್ಯವಸ್ಥೆಯಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಮತ್ತು ಇಂತಹ ಬದಲಾವಣೆಯನ್ನು ಎಫ್ಐಸಿಸಿಎಲ್ ಭೌತಿಕ ಬದಲಾವಣೆ ಎಂದು ಪರಿಗಣಿಸಿದಲ್ಲಿ; ಎಫ್ಐಸಿಸಿಎಲ್ ಅನಿಸಿಕೆಯಲ್ಲಿ (ಎಚ್) ಸಾಲ ಮರುಪಾವತಿಸುವ ಸಾಲಗಾರ(ರ)ನ ಸಾಮರ್ಥ್ಯ ಅಥವಾ ಎಫ್ಐಸಿಸಿಎಲ್ ಹಿತಾಸಕ್ತಿಗೆ ಚ್ಯುತಿ ತರುವ ಯಾವುದೇ ಸನ್ನಿವೇಶ ಉಂಟಾದಲ್ಲಿ ಬೇಪಾವತಿ ಸಂಭವಿಸುತ್ತದೆ ಎಂದು ಪರಿಗಣಿಸಲಾಗುತ್ತದೆ.

2.2 ಆ ಬಳಿಕ ಯಾವುದೇ ಸಮಯದಲ್ಲಿ ಬೇಪಾವತಿ ಸಂದರ್ಭ ಬಂದಲ್ಲಿ, ಎಫ್ಐಸಿಸಿಎಲ್ ಕೂಡಲೇ ಉಳಿಕೆ ಮೊತ್ತವನ್ನು ಬಾಕಿ ಹಾಗೂ ಪಾವತಿಸತಕ್ಕದ್ದು ಎಂದು ಘೋಷಿಸುವ ಅಕಾರ ಹೊಂದುತ್ತದೆ. ಸಾಲ ಮತ್ತು /ಅಥವಾ ಈ ಒಪ್ಪಂದದ ಅಡಿ ಬಾಕಿ ಇರುವ ಎಲ್ಲ ಮೊತ್ತವನ್ನು ನೋಟಿಸ್ ನಿಯಮಗಳ ಅನುಸಾರ ಮತ್ತು ಮುಂದೆ ಇಂತಹ ನೋಟಿಸ್ ಅಥವಾ ಇತರ ಕಾನೂನು ಶಿಷ್ಟಾಚಾರಗಳು ಇಲ್ಲದೇ ಸಾಲಗಾರ(ರು) ಪಾವತಿ ಮಾಡಬೇಕು. ನಿಗದಿತ ಅವಯಲ್ಲಿ ಸಾಲಗಾರ(ರು) ಈ ಮೇಲೆ ಹೇಳಿದ ಪಾವತಿ ಮಾಡಲು ವಿಫಲವಾದಲ್ಲಿ, ಅನ್ವಯವಾಗುವ ಕಾನೂನು ಅಡಿಯಲ್ಲಿ ಲಭ್ಯವಾಗಬಹುದಾದ ಯಾವುದೇ ಹಕ್ಕು ಅಥವಾ ಪರಿಹಾರ ಕ್ರಮ ಚಲಾಯಿಸುವ ಹಕ್ಕು ಸಂಪೂರ್ಣವಾಗಿ ಎಫ್ಐಸಿಸಿಎಲ್ ವಿವೇಚನೆಗೆ ಬಿಟ್ಟಿದ್ದಾಗಿರುತ್ತದೆ.

ಸಾಲಗಾರ(ರ) ☒ ಸಹ ಸಾಲಗಾರ(ರ) ☒ ಎಫ್ಐಸಿಸಿಎಲ್ ಪರವಾಗಿ ಅಧಿಕೃತ ಸಹಿದಾರ

**3. ಇತರ ನಿಯಮಗಳು ಹಾಗೂ ಷರತ್ತುಗಳು**

3.1 ಸಾಲಗಾರ(ರ)ನ ಎಲ್ಲ ಸ್ವತ್ತುಗಳನ್ನು ತನ್ನ ಹಿಡಿತದಲ್ಲಿ ಇಟ್ಟುಕೊಳ್ಳುವ ಅಕಾರ ಎಫ್‌ಐಸಿಸಿಎಲ್‌ಗೆ ಇರುತ್ತದೆ. ಅಲ್ಲದೇ ಸಾಲಗಾರ(ರಿಂದ) ನಿಂದ ಎಫ್‌ಐಸಿಸಿಎಲ್‌ಗೆ ಬಾಕಿ ಇರುವ ಯಾವುದೇ ಹಣವನ್ನು ಜಮಾ ಖಾತೆಯಿಂದ ಮುರಿದುಕೊಳ್ಳುವ ಹಾಗೂ ಬಾಕಿ ಹಣ ವಸೂಲಾತಿಗೆ ಸಾಲಗಾರ(ರ) ಎಲ್ಲ ಖಾತೆಗಳನ್ನು ಜೋಡಿಸುವ ಹಕ್ಕು ಎಫ್‌ಐಸಿಸಿಎಲ್‌ಗೆ ಇರುತ್ತದೆ.

3.2 ಸಾಲಗಾರ(ರ)ನಿಗೆ ನೋಟಿಸ್ ಕೊಡದೇ ಎಫ್‌ಐಸಿಸಿಎಲ್ ಸಾಲಗಾರರು ಎಫ್‌ಐಸಿಸಿಎಲ್‌ನಲ್ಲಿ ಹೊಂದಿರುವ ಯಾವುದೇ ಖಾತೆಯಲ್ಲಿ ಇರುವ ಜಮಾ ಹಣದ ಮೇಲೆ ಎಫ್‌ಐಸಿಸಿಎಲ್ ಮುರಿದುಕೊಳ್ಳುವ ಹಕ್ಕನ್ನು ಯಾವಾಗಲೂ ಹೊಂದಿರುತ್ತದೆ.

3.3 ಈ ಒಪ್ಪಂದ ಹಾಗೂ/ಅಥವಾ ಸಾಲದ ಅಡಿಯಲ್ಲಿ ಸಾಲಗಾರ(ರು) ನೇರವಾಗಿ ಅಥವಾ ಪರೋಕ್ಷವಾಗಿ ಎಲ್ಲ ಅಥವಾ ತನ್ನ ಯಾವುದೇ ಹಕ್ಕುಗಳನ್ನು, ಪ್ರಯೋಜನಗಳನ್ನು ಅಥವಾ ಹೊಣೆಗಾರಿಕೆಗಳನ್ನು ವರ್ಗಾಯಿಸುವುದಿಲ್ಲ. ಎಫ್‌ಐಸಿಸಿಎಲ್ ಯಾವಾಗ ಬೇಕಾದರೂ ಒಪ್ಪಿಗೆ ಇಲ್ಲದೇ ಅಥವಾ ಮಾರಾಟ, ನಿಯೋಜನೆ, ಭದ್ರತೆ, ಹೊಸ ಕರಾರು ಸೇರ್ಪಡೆ ಅಥವಾ ಈ ಒಪ್ಪಂದದ ಅಡಿ ಇಡಿಯಾಗಿ ಅಥವಾ ಭಾಗವಾಗಿ ಯಾವುದೇ ವ್ಯಕ್ತಿಗೆ ತನ್ನ ಎಲ್ಲ ಅಥವಾ ಯಾವುದೇ ಹಕ್ಕುಗಳನ್ನು, ಪ್ರಯೋಜನಗಳನ್ನು ಹಾಗೂ ಹೊಣೆಗಾರಿಕೆಗಳನ್ನು ವರ್ಗಾಯಿಸಲು ಸಾಲಗಾರ(ರ) ನಿಗೆ ಇರುವ ಅಕಾರವನ್ನು ಉಲ್ಲೇಖಿಸದೇ ಇಂತಹ ಯಾವುದೇ ಮಾರಾಟ, ನಿಯೋಜನೆ ಅಥವಾ ವರ್ಗಾವಣೆಯನ್ನು ನಿರ್ಧರಿಸಬಹುದು,

3.4 ಸಾಲಗಾರ(ರು) ಸಲ್ಲಿಸಿದ ಯಾವುದೇ ಸಂಗತಿ ಅಥವಾ ಮಾಹಿತಿಯನ್ನು ಪರಿಶೀಲಿಸಲು ಎಫ್‌ಐಸಿಸಿಎಲ್ ಆಯ್ಕೆಯ ಒಬ್ಬರು ಅಥವಾ ಹೆಚ್ಚಿನ ಮೂರನೇ ವ್ಯಕ್ತಿಗಳನ್ನು ನೇಮಿಸುವ ಸಂಪೂರ್ಣ ಅಕಾರವನ್ನು ಎಫ್‌ಐಸಿಸಿಎಲ್ ಹೊಂದಿರುತ್ತದೆ ಎನ್ನುವುದನ್ನು ಸಾಲಗಾರ(ರು) ಸ್ಪಷ್ಟವಾಗಿ ಗುರುತಿಸುತ್ತಾನೆ ಮತ್ತು ಒಪ್ಪುತ್ತಾನೆ. ಇಂತಹ ಮೂರನೇ ವ್ಯಕ್ತಿಗಳನ್ನು ವರ್ಗಾವಣೆ ಮಾಡುವುದು ಅಥವಾ ನಿಯೋಜಿಸುವುದು, ಎಫ್‌ಐಸಿಸಿಎಲ್‌ಗೆ ಅಗತ್ಯವಿರುವಂತೆ ಎಫ್‌ಐಸಿಸಿಎಲ್‌ಗೆ ಬಾಕಿ ಇರುವ ಮೊತ್ತಗಳನ್ನು ವಸೂಲಿ ಮಾಡಲು/ಸ್ವೀಕರಿಸಲು ಅಥವಾ ಸಾಲದ ಅಡಿ ಬಾಕಿ ಇರುವ ಹಣವನ್ನು ಸಂಗ್ರಹಿಸಲು ಎಲ್ಲ ಕ್ರಮಗಳನ್ನು ತೆಗೆದುಕೊಳ್ಳುವ ಹಕ್ಕು ಹಾಗೂ ಆ ಅಕಾರ ಇರುತ್ತದೆ. ಬಾಕಿ ಮೊತ್ತವನ್ನು ಪಡೆಯಲು ಸಾಲಗಾರ(ರ)ಕಚೇರಿ ಅಥವಾ ನಿವಾಸಕ್ಕೆ ಭೇಟಿ ಹಾಗೂ ಇಂತಹ ಉದ್ದೇಶಗಳಿಗೆ ಸೂಕ್ತ ಎಂದು ಮೂರನೇ ವ್ಯಕ್ತಿ ಪರಿಗಣಿಸುವಂತೆ ಸಾಮಾನ್ಯವಾಗಿ ಕೈಗೊಳ್ಳುವ ಎಲ್ಲ ಕಾನೂನು ಕ್ರಮಗಳನ್ನು ಅನುಸರಿಸುವ ಅಕಾರ ಎಫ್‌ಐಸಿಸಿಗೆ ಇರುತ್ತದೆ.

3.5 ಸಾಲಗಾರ(ರು) ಸಾಲಗಾರ(ರಿಗೆ)ನಿಗೆ, ಸಾಲಕ್ಕೆ, ಸಾಲಗಾರ(ರ)ನ ಖಾತೆಗೆ ಮತ್ತು ಈ ಒಪ್ಪಂದಕ್ಕೆ ಸಂಬಂಸಿರುವ ಎಲ್ಲ ಅಥವಾ ಯಾವುದೇ ಮಾಹಿತಿ ಅಥವಾ ಡೇಟಾವನ್ನು, ಸಾಲಗಾರ(ರಿಂದ) ನಿಂದ ಬಾಕಿ ಇರಿಸಿಕೊಳ್ಳುವಿಕೆ, ಸಾಲಗಾರ(ರ)ನ ಹೊಣೆಗಾರಿಕೆಗಳ ಬಿಡುಗಡೆಯನ್ನು ಒಳಗೊಂಡು ಆದರೆ ಅದಕ್ಕಷ್ಟೇ ಸೀಮಿತವಾಗಿಲ್ಲದೇ ಎಫ್‌ಐಸಿಸಿಎಲ್ ಸೂಕ್ತ ಮತ್ತು ಅಗತ್ಯವೆಂದು ನಿರ್ಣಯಿಸುವಂತೆ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾಕ್ಕೆ (''ಆರ್‌ಬಿಐ'')ಗೆ ಮತ್ತು ಕ್ರೆಡಿಟ್ ಇನಾರ್ಮೇಶನ್ ಬ್ಯೂರೋ (ಇಂಡಿಯಾ) ಲಿಮಿಟೆಡ್ ಮತ್ತು/ಅಥವಾ ಆರ್‌ಬಿಐ ನಿಂದ ಅಕಾರ ಪಡೆದಿರುವ ಬೇರೆ ಯಾವುದೇ ಏಜೆನ್ಸಿಗೆ, ಎಫ್‌ಐಸಿಸಿಎಲ್‌ನ ವೃತ್ತಿಪರ ಸಲಹೆಗಾರರು ಮತ್ತು ಸಮಾಲೋಚಕರಿಗೆ, ಎಫ್‌ಐಸಿಸಿಎಲ್‌ನ ಸಹಯೋಗಿಗಳು ಹಾಗೂ ಅೀನ ಸಂಸ್ಥೆಗಳಿಗೆ ಮತ್ತು ಇದರ ಸೇವಾ ಪೂರೈಕೆದಾರರಿಗೆ, ಮೂರನೇ ವ್ಯಕ್ತಿಗಳು ಅಥವಾ ಬೇರೆಯವರಿಗೆ ಇದರಿಂದ ಸೂಚಿಸಿರುವಂತೆ ಈ ಒಪ್ಪಂದಕ್ಕೆ/ಸಾಲಕ್ಕೆ ಸಂಬಂಸಿ, ಮತ್ತು/ಅಥವಾ ಕಾನೂನಿನ ಅಗತ್ಯತೆಯಂತೆ ಅಥವಾ ನಿಯಮಾವಳಿಯಂತೆ, ನ್ಯಾಯಾಲಯದ ಆದೇಶದಂತೆ ಅಥವಾ ಯಾವುದೇ ಶಾಸನಬದ್ಧ ನಿಯಂತ್ರಕ ಅಥವಾ ಮೇಲ್ವಿಚಾರಣಾ ಪ್ರಾಕಾರದ ಕೋರಿಕೆಯಂತೆ ಬಹಿರಂಗಗೊಳಿಸುವುದಕ್ಕೆ ಹಾಗೂ ಹಂಚಿಕೊಳ್ಳುವುದಕ್ಕೆ ಒಪ್ಪುತ್ತಾನೆ ಮತ್ತು ಸಮ್ಮತಿಸಿರುತ್ತಾನೆ.

3.6 ಸಾಲಗಾರ(ರು) ಹಾಗೂ ಆತನ ಸಾಲ ಖಾತೆಗಳು ಹಾಗೂ ಅಥವಾ ಎಫ್‌ಐಸಿಸಿಎಲ್ ಜತೆಗಿನ ವ್ಯವಹಾರ ಸಂಬಂಧ ಕುರಿತಾದ ಮಾಹಿತಿಗಳನ್ನು ಎಫ್‌ಐಸಿಸಿಎಲ್, ಇದರ ಅಕಾರಿಗಳು ಹಾಗೂ ಏಜೆಂಟರು ಬಹಿರಂಗಪಡಿಸುವುದಕ್ಕೆ ಸಾಲಗಾರ(ರು) ಈ ಮೂಲಕ ಒಪ್ಪುತ್ತಾನೆ. ಯಾವುದೇ ಸೌಲಭ್ಯಗಳು, ತೆಗೆದುಕೊಂಡ ಯಾವುದೇ ಭದ್ರತೆ, ಮಾಡಿದ ವ್ಯವಹಾರ ಹಾಗೂ ಬಾಕಿ ಸ್ಥಿತಿಗತಿ ಮಾಹಿತಿಗಳು ಕೂಡ ಇಲ್ಲಿ ಬರುತ್ತವೆ. ಆದರೆ ಇವುಗಳಿಗೇ ಸೀಮಿತವಲ್ಲ.

(I) ಎಫ್‌ಐಸಿಸಿಎಲ್‌ನ ವೃತ್ತಿಪರ ಸಲಹೆಗಾರರು ಹಾಗೂ ಸೇವಾದಾತರು;

(ii) ಯಾವುದೇ ಒಪ್ಪಂದದ ಅಡಿ ಎಫ್‌ಐಸಿಸಿಎಲ್‌ನ ಯಾವುದೇ ಹಕ್ಕುಗಳು ಅಥವಾ ಬಾಧ್ಯತೆಗಳಿಗೆ ಸಂಬಂಧಸಿದ ಯಾವುದೇ ನಿಜವಾದ ಅಥವಾ ಸಂಭವನೀಯ ನಿಯೋಜಕರು, ಹೊಸ ವ್ಯಕ್ತಿಗಳ ಸೇರ್ಪಡೆ, ವರ್ಗಾವಣೆಯಾಗುವಾತ, ಭಾಗಿದಾರ ಅಥವಾ ಉಪ ಭಾಗಿದಾರ;

(iii) ನೀಡಿದ ಸೇವೆಗಳು ಅಥವಾ ಎಫ್‌ಐಸಿಸಿಎಲ್ ನೀಡಿದ ಸೇವೆಗಳಿಗೆ ಸಂಬಂಧಿಸಿದ ಉದ್ದೇಶಗಳಿಗೆ ಸಾಲ ಭದ್ರತೆ ಅಥವಾ ಹಣಕಾಸು ಬೆಂಬಲದ ಯಾವುದೇ ರೇಟಿಂಗ್ ಏಜೆನ್ಸಿ, ವಿಮಾದಾರ ಅಥವಾ ನೇರ ಅಥವಾ ಪರೋಕ್ಷ ಪೂರೈಕೆದಾರ;

**4. ಮಧ್ಯಸ್ಥಿಕೆ**

4.1 ಈ ಒಪ್ಪಂದದಿಂದ ಉಂಟಾಗುವ ಎಲ್ಲ ವಿವಾದಗಳು, ವ್ಯತ್ಯಾಸಗಳು ಮತ್ತು/ಅಥವಾ ಕ್ಲೇಮುಗಳನ್ನು 1996ರ ಮಧ್ಯಸ್ಥಿಕೆ ಮತ್ತು ಹೊಂದಾಣಿಕೆಯ ಕಾಯಿದೆ ಅಥವಾ ಇದರ ಯಾವುದೇ ಶಾಸನಾತ್ಮಕ ತಿದ್ದುಪಡಿಗಳ ಪ್ರಕಾರ ಫೈಸಲಾತಿ ಮಾಡಬೇಕು ಮತ್ತು ಇದನ್ನು ಎಫ್‌ಐಸಿಸಿಎಲ್ ನಾಮನಿರ್ದೇಶನ ಮಾಡುವ/ನೇಮಕ ಮಾಡುವ ಏಕೈಕ ಮಧ್ಯಸ್ಥಿಕೆದಾರರಿಗೆ ಉಲ್ಲೇಖಿಸಬೇಕು. ಮಧ್ಯಸ್ಥಿಕೆದಾರರೆಂದು ನೇಮಕ ಮಾಡಿರುವ ವ್ಯಕ್ತಿಯ ಮರಣ, ನಿರಾಕರಣೆ, ಅಲಕ್ಷ್ಯ, ಅಸಾಮರ್ಥ್ಯದ ಸಂದರ್ಭದಲ್ಲಿಯೂ, ಎಫ್‌ಐಸಿಸಿಎಲ್ ಮತ್ತೊಬ್ಬ ವ್ಯಕ್ತಿಯನ್ನು ಮಧ್ಯಸ್ಥಿಕೆದಾರರಾಗಿ ನೇಮಕ ಮಾಡಬಹುದು. ಮಧ್ಯಂತರ ನಿರ್ಣಯಗಳನ್ನು ಒಳಗೊಂಡು ಮಧ್ಯಸ್ಥಿಕೆದಾರರು ನೀಡುವ ನಿರ್ಣಯಗಳು ಅಂತಿಮವಾಗಿರುತ್ತವೆ ಮತ್ತು ಸಂಬಂಧಿಸಿದ ಎಲ್ಲ ಪಕ್ಷಗಳಿಗೂ ನಿರ್ಬಂಧಕವಾಗಿರುತ್ತದೆ. ಮಧ್ಯಸ್ಥಿಕೆಯ ವಿಚಾರಣೆಗಳನ್ನು ಕೈಗೊಳ್ಳಲು ಮಧ್ಯಸ್ಥಿಕೆದಾರರು ಕಾಲಕಾಲಕ್ಕೆ ಪ್ರಕ್ರಿಯೆಯನ್ನು ನಿಗದಿಪಡಿಸಬಹುದು ಮತ್ತು ತಾನು ಸೂಕ್ತವೆಂದು ಪರಿಗಣಿಸುವ ರೀತಿಯಲ್ಲಿ ಮಧ್ಯಸ್ಥಿಕೆಯ ವಿಚಾರಣೆಗಳನ್ನು ಕೈಗೊಳ್ಳಬಹುದು. ಮಧ್ಯಸ್ಥಿಕೆಯ ವಿಚಾರಣೆಗಳನ್ನು ಸಾಲದ ಸಾರಾಂಶದ ಅನುಬಂಧದಲ್ಲಿ ಉಲ್ಲೇಖಿಸಿರುವಂತೆ ನಡೆಸಬೇಕು. ಇಲ್ಲಿ ಉಲ್ಲೇಖಿಸಿದ ಮಧ್ಯಸ್ಥಿಕೆಯ ವಿಧಕ್ಕೆ ಒಳಪಟ್ಟು, ಸಾಲದ ಸಾರಾಂಶದ ಅನುಬಂಧದಲ್ಲಿ ಸಮರ್ಥವಾಗಿರುವ ನ್ಯಾಯಾಲಯಗಳು ಅನನ್ಯವಾದ ನ್ಯಾಯವ್ಯಾಪ್ತಿಯನ್ನು ಈ ಒಪ್ಪಂದಕ್ಕೆ ಸಂಬಂಧಿಸಿ ಉಂಟಾಗುವ ಯಾವುದೇ ಖಟ್ಲೆ ಅಥವಾ ಕಾನೂನು ವಿಚಾರಣೆಗಳಲ್ಲಿ ಹೊಂದಿರುತ್ತವೆ. ಆದಾಗ್ಯೂ ಇದು ಯಾವುದೇ ಇತರ ನ್ಯಾಯಾಲಯಗಳಲ್ಲಿ ಅಥವಾ ನ್ಯಾಯಮಂಡಳಿಗಳಲ್ಲಿ ವಿಚಾರಣೆಗಾಗಿ ಪ್ರಕರಣ ದಾಖಲಿಸುವ ಸಾಲ ನೀಡಿದವರ ಹಕ್ಕುಗಳನ್ನು ಮಿತಿಗೊಳಿಸುವುದಿಲ್ಲ.

**5. ವಿವಿಧ ವಿಷಯಗಳು**

5.1 ಸೂಕ್ತ ನ್ಯಾಯವ್ಯಾಪ್ತಿಯ ನ್ಯಾಯಾಲಯದಿಂದ ಈ ಒಪ್ಪಂದದ ಯಾವುದೇ ನಿಯಮ ಅಥವಾ ನಿಬಂಧನೆ ಅಸಿಂಧು ಎಂದು ಘೋಷಣೆಯಾದಲ್ಲಿ, ಈ ಒಪ್ಪಂದದ ಉಳಿದ ನಿಯಮಗಳು ಹಾಗೂ ನಿಬಂಧನೆಗಳಿಗೆ ಯಾವುದೇ ಧಕ್ಕೆ ಆಗುವುದಿಲ್ಲ ಮತ್ತು ಅವು ಸಂಪೂರ್ಣವಾಗಿ ಜಾರಿಯಲ್ಲಿ ಇರುತ್ತವೆ.

5.2 ಅರ್ಜಿ ನಮೂನೆಯಲ್ಲಿ ಭರ್ತಿ ಮಾಡಿದ ಎಲ್ಲ ವಿವರಗಳು ಹಾಗೂ ಮಾಹಿತಿಗಳು ಮತ್ತು ಅರ್ಜಿಯ ಜತೆ ಕೊಟ್ಟ ದಾಖಲೆಗಳು ಎಲ್ಲ ರೀತಿಯಿಂದಲೂ ಸತ್ಯ, ಸಮಗ್ರ ಹಾಗೂ ಪರಿಷ್ಕರಣೆಗೊಂಡಿವೆ. ಸಾಲ ಮಂಜೂರಾತಿ ಮಾಡುವ ನಿರ್ಧಾರದ ಮೇಲೆ ಪರಿಣಾಮ ಬೀರುವ ಯಾವುದೇ ವಿಷಯಗಳ ವಿವರಗಳನ್ನು ಮುಚ್ಚಿಟ್ಟಿಲ್ಲ ಎಂದು ಸಾಲಗಾರ(ರು) ಘೋಷಿಸುತ್ತಾನೆ.

5.3 ಸಾಲಗಾರ(ರ)ನ ಅಕಾರಿಗಳು ಈ ಒಪ್ಪಂದವನ್ನು ಜಾರಿಗೆ ತರುತ್ತಾರೆ. ಈ ದಾಖಲೆಯ ಅನುಸಾರ ಕಾರ್ಯಗತಗೊಳ್ಳುವ ದಾಖಲೆಗಳು ಕಚೇರಿಯಲ್ಲಿ ಸೂಕ್ತವಾಗಿವೆ ಮತ್ತು ಇದನ್ನೇ ಜಾರಿಗೆ ತರುವುದಕ್ಕೆ ಸಂಪೂರ್ಣ ಅಧಕಾರ ನೀಡಲಾಗಿದೆ.

5.4 ಈ ಒಪ್ಪಂದವನ್ನು ಜಾರಿಗೆ ತರುವ ಸಂಪೂರ್ಣ ಅಕಾರ ಹಾಗೂ ಸಾಮರ್ಥ್ಯ ಸಾಲಗಾರ(ರಿಗೆ)ನಿಗೆ ಇದೆ. ಈ ಒಪ್ಪಂದಕ್ಕೆ ಅನುಮತಿ ಹಾಗೂ ಜಾರಿಗೆ ಬೇಕಾಗಿರುವ ಎಲ್ಲ ಅಗತ್ಯ ಕ್ರಮಗಳನ್ನು (ಕಾರ್ಪೊರೇಟ್, ಶಾಸನಬದ್ಧ ಅಥವಾ ಬೇರೆ) ತೆಗೆದುಕೊಳ್ಳಲಾಗಿದೆ.

5.5 ಸಾಲಗಾರ(ರು) ಬಾಕಿ ಉಳಿಸಿಕೊಂಡಾಗ ಅಥವಾ ಒಪ್ಪಂದದ ಉಲ್ಲಂಘನೆ ಮಾಡಿದಾಗ ಯಾವುದೇ ಹಕ್ಕನ್ನು, ಅಕಾರವನ್ನು ಅಥವಾ ಪರಿಹಾರ ಪಡೆಯುವ ಹಕ್ಕನ್ನು ಚಲಾಯಿಸುವುದರಲ್ಲಿನ ಯಾವುದೇ ವಿಳಂಬ ಅಥವಾ ಚಲಾಯಿಸದಿರುವಿಕೆಯು ಎಫ್‌ಐಸಿಸಿಎಲ್‌ನ ಅಂತಹ ಹಕ್ಕು, ಅಕಾರ ಅಥವಾ ಪರಿಹಾರವನ್ನು ಮೊಟಕುಗೊಳಿಸುವುದಿಲ್ಲ ಅಥವಾ ಅದನ್ನು ಅಂತಹ ಉಲ್ಲಂಘನೆ ಅಥವಾ ಬಾಕಿ ಉಳಿಸಿಕೊಳ್ಳುವಿಕೆಯ ಮನ್ನಾ ಅಥವಾ ನಂತರ ಉಂಟಾಗುವ ಅಂತಹ ಅಥವಾ ಬೇರೆ ಉಲ್ಲಂಘನೆಗೆ ಒಪ್ಪಿಗೆ ಅಥವಾ ಬಾಕಿಯ ಮನ್ನಾ ಎಂದಾಗಲೀ ಭಾವಿಸಬಾರದು. ಈ ಒಪ್ಪಂದದಲ್ಲಿ ಎಫ್‌ಐಸಿಸಿಎಲ್‌ಗೆ ನಡಿದ ಹಕ್ಕುಗಳು ಹಾಗೂ ಪರಿಹಾರಗಳು ಸಂಚಿತವಾಗಿವೆ ಮತ್ತು ಕಾನೂನು ನೀಡಿದ ಯಾವುದೇ ಹಕ್ಕುಗಳು ಅಥವಾ ಪರಿಹಾರಗಳಿಂದ ಹೊರತಾಗಿಲ್ಲ.

5.6 ನಗದೀಕರಿಸದ ಚೆಕ್ಕುಗಳ ನಾಶ: ಸಾಲಕ್ಕೆ ಸಂಬಂಧಿಸಿ ಎಫ್‌ಐಸಿಸಿಎಲ್ ಪರವಾಗಿ ಕೊಟ್ಟ ಯಾವುದೇ ಚೆಕ್ಕುಗಳು ನಗದೀಕರಣವಾಗದಿದ್ದಲ್ಲಿ/ಬಳಕೆಯಾಗದಿದ್ದಲ್ಲಿ ಮತ್ತು ಪ್ರಸ್ತುತ ಅವು ಎಫ್‌ಐಸಿಸಿಎಲ್ ಸುಪರ್ದಿಯಲ್ಲಿ ಇದ್ದಲ್ಲಿ ಸಾಲ ತೀರುವಳಿ ಅವಧಿ ಮುಗಿದ ಬಳಿಕವೋ, ಸಾಲದ ಪೂರ್ವಪಾವತಿ ಮೂಲಕವೋ ಸಾಲ ಪೂರ್ಣಗೊಂಡ ಬಳಿಕ ಅವುಗಳನ್ನು ಯಾವುದೇ ನೋಟಿಸ್ ಇಲ್ಲದೇ ತಕ್ಷಣವೇ ರದ್ದು ಹಾಗೂ/ಅಥವಾ ನಾಶ ಮಾಡಲಾಗುತ್ತದೆ.

5.7 ಈ ಒಪ್ಪಂದದ ಅನುಸಾರ ಸಾಲಗಾರ(ರಿಗೆ)ನಿಗೆ ಎಫ್‌ಐಸಿಸಿಎಲ್ ಯಾವುದೇ ನೋಟಿಸ್/ಪತ್ರ ನೀಡಬೇಕಾಗಿ ಬಂದಲ್ಲಿ ಸಾಲ ಸಾರಾಂಶ ಅನುಬಂಧದಲ್ಲಿ ಉಲ್ಲೇಖಿಸಿರುವ ವಿಳಾಸಕ್ಕೆ ಲಿಖಿತವಾಗಿ ಕಳಿಸಲಾಗುತ್ತದೆ. ಮತ್ತು ಇಂತಹ ಲಿಖಿತ ನೋಟಿಸ್ ಅನ್ನು ಎಫ್‌ಐಸಿಸಿಎಲ್ ಸಾಲಗಾರ(ರಿಗೆ)ನಿಗೆ ನೋಂದಾಯಿತ/ಪೂರ್ವಪಾವತಿ ಅಂಚೆ ಮೂಲಕ ಸಾಲ ಸಾರಾಂಶ ಅನುಬಂಧದಲ್ಲಿ ನಮೂದಿಸಿರುವ ಶಾಖಾ ವಿಳಾಸಕ್ಕೆ ಕಳಿಸಲಾಗುತ್ತದೆ. ಸಾಲಗಾರ(ರು) ತನ್ನ ವಿಳಾಸದಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಅದನ್ನು ಬದಲಾಯಿಸಿದ ಒಂದು ವಾರದೊಳಗೆ ಎಫ್‌ಐಸಿಸಿಎಲ್ ಗೆ ಲಿಖಿತವಾಗಿ ತಿಳಿಸಬೇಕು.

---

| | | |
|---|---|---|
| ಸಾಲಗಾರ(ರ) ☒ | ಸಹ ಸಾಲಗಾರ(ರ) ☒ | ಎಫ್‌ಐಸಿಸಿಎಲ್ ಪರವಾಗಿ ಅಧಿಕೃತ ಸಹಿದಾರ |

5.8 ಇಲ್ಲಿಪ್ರಸ್ತಾಪವಾಗಿರುವ ನಿಬಂಧನೆಗಳು ಈ ದಾಖಲೆಯಲ್ಲಿ ವಿವರಿಸಲ್ಪಟ್ಟರೂ ಈ ಒಪ್ಪಂದದ ಜತೆ ಲಗತ್ತಾಗಿರುವ ಸಾಲ ಸಾರಾಂಶ ಅನುಬಂಧವು ಈ ಒಪ್ಪಂದದ ಅವಿಭಾಜ್ಯ ಅಂಗವಾಗಿರುತ್ತದೆ.

5.9 ಒಪ್ಪಂದದ ನಿಯಮಗಳಲ್ಲಿರುವ ಎಲ್ಲ ವಿವರಗಳನ್ನು ಸಾಲಗಾರ(ರ)ನ ಸಮ್ಮುಖದಲ್ಲಿ ಭರ್ತಿ ಮಾಡಲಾಗಿದೆ ಮತ್ತು ಸಾಲದ ಎಲ್ಲ ನಿಯಮಗಳು ಹಾಗೂ ಷರತ್ತುಗಳನ್ನು ಓದಿ ಅರ್ಥಮಾಡಿಕೊಳ್ಳಲಾಗಿದೆ ಎಂದು ಸಾಲಗಾರ(ರು) ಅನುಮೋದಿಸುತ್ತಾನೆ. ಈ ಒಪ್ಪಂದದ ನಿಯಮಗಳು ಹಾಗೂ ಷರತ್ತುಗಳು ಮತ್ತು ಇತರ ದಾಖಲೆಗಳನ್ನು ತನಗೆ ಅರ್ಥವಾಗುವ ಭಾಷೆಯಲ್ಲಿ ವಿವರಿಸಲಾಗಿದೆ. ಮತ್ತು ಇವುಗಳನ್ನು ಸಂಪೂರ್ಣವಾಗಿ ಅರ್ಥಮಾಡಿಕೊಂಡಿದ್ದೇನೆ. ಈ ಒಪ್ಪಂದದ ವಿಷಯಗಳನ್ನು ಅರ್ಥಮಾಡಿಕೊಂಡು ಪರಿಶೀಲಿಸಿದ ಬಳಿಕ ಸಹಿ ಹಾಕಿದ್ದೇನೆ ಎಂದೂ ಸಾಲಗಾರ(ರು) ಒಪ್ಪುತ್ತಾನೆ.

5.10 ಜಾರಿ ರದ್ದತಿ: ಈ ಒಪ್ಪಂದ ಮತ್ತು ಇಲ್ಲಿ ಲಗತ್ತಿಸಿರುವ ಯಾವುದೇ ಇತರ ದಾಖಲೆಗಳು ಇಲ್ಲಿ ಉಲ್ಲೇಖಿಸಿರುವ ಹಾಗೂ ಇದಕ್ಕೆ ಸಾಂದರ್ಭಿಕವಾದ ಎಲ್ಲ ನಿಯಮಗಳು ಹಾಗೂ ಷರತ್ತುಗಳನ್ನು ಒಟ್ಟುಗೂಡಿಸುತ್ತವೆ ಮತ್ತು ಎಲ್ಲ ಮೌಖಿಕ ಮಾತುಕತೆಗಳು ಮತ್ತು ಪೂರ್ವ ಲಿಖಿತ ವಿಷಯಗಳನ್ನು ಇಲ್ಲಿ ನೀಡಿರುವ ವಿಷಯಕ್ಕೆ ಸಂಬಂಧಿಸಿದಂತೆ ರದ್ದುಗೊಳಿಸುತ್ತವೆ, ಆದರೆ ಇವು ಈ ಒಪ್ಪಂದಕ್ಕೆ ಮೊದಲು ನೀಡಿರುವ ಒಪ್ಪಂದದ ನಿಯಮಗಳೊಂದಿಗೆ ಸಂಘರ್ಷಿಸದ ಮತ್ತು ಅವುಗಳಿಗೆ ಪೂರಕವಾಗಿರುವ ಮಂಜೂರಾತಿ ಪತ್ರದ ನಿಯಮಗಳನ್ನು ಹೊರತುಪಡಿಸಿರುತ್ತವೆ. ಈ ಒಪ್ಪಂದ ಅಥವಾ ಇಲ್ಲಿ ಲಗತ್ತಿಸಿರುವ, ಉಲ್ಲೇಖಿಸಿರುವ ಯಾವುದೇ ಒಪ್ಪಂದ ಅಥವಾ ದಾಖಲೆಗಳಲ್ಲಿ ನಿಯಮಗಳು, ಷರತ್ತುಗಳು ಹಾಗೂ ನಿಬಂಧನೆಗಳ ನಡುವೆ ಯಾವುದೇ ಸಂಘರ್ಷ ಇದ್ದಲ್ಲಿ, ಆಗ ಈ ಒಪ್ಪಂದದ ನಿಯಮಗಳು, ನಿಬಂಧನೆಗಳು ಹಾಗೂ ಷರತ್ತುಗಳು ಜಾರಿಯಲ್ಲಿ ಇರುತ್ತವೆ.

5.11 ಎಫ್ಐಸಿಸಿಎಲ್‌ನ ಅಧಿಕೃತ ಅಧಿಕಾರಿ ಈ ಒಪ್ಪಂದಕ್ಕೆ ಸಹಿ ಹಾಕಿದ ಸ್ಥಳ ಹಾಗೂ ದಿನಾಂಕದಂದು ಈ ಒಪ್ಪಂದವು ಅಂತಿಮವಾಗುತ್ತದೆ ಮತ್ತು ಕಾನೂನುಬದ್ಧವಾಗುತ್ತದೆ ಎಂದು ಸಾಲಗಾರ (ರು) ಒಪ್ಪಿಕೊಳ್ಳುತ್ತಾನೆ.

ಈ ಹೇಳಿಕೆಗಳನ್ನು ಕಾರ್ಯಗತಗೊಳಿಸಲಾಗಿದೆ/ಕಾರ್ಯಗತವಾಗುವಂತೆ ಮಾಡಲಾಗುತ್ತದೆ ಎನ್ನುವುದನ್ನು ದೃಢೀಕರಿಸುವುದಕ್ಕಾಗಿ ಮೇಲೆ ಉಲ್ಲೇಖಿಸಿದ ದಿನ, ತಿಂಗಳು ಹಾಗೂ ವರ್ಷದಲ್ಲಿ ಪಾರ್ಟಿಗಳು ಸಹಿ ಮಾಡಿರುತ್ತಾರೆ.

| ಸಾಲಗಾರ (ರಿಗೆ) ನಿಗೆ | | |
|---|---|---|
| ಸಾಲಗಾರನ ಹೆಸರು:<br>..............................................................<br>ಅಧಿಕೃತ ಸಹಿದಾರನ ಹೆಸರು (ಮಾಲೀಕತ್ವ, ಸಹಭಾಗಿತ್ವ ಹಾಗೂ ಕಂಪನಿಗಳಿಗೆ)<br>.................................................................... | | ☒<br>.......................................<br>(ಸಹಿ) |
| ಸಹ ಸಾಲಗಾರನ ಹೆಸರು:<br>..............................................................<br>ಅಧಿಕೃತ ಸಹಿದಾರನ ಹೆಸರು (ಮಾಲೀಕತ್ವ, ಸಹಭಾಗಿತ್ವ ಹಾಗೂ ಕಂಪನಿಗಳಿಗೆ)<br>.................................................................... | | ☒<br>.......................................<br>(ಸಹಿ) |
| ಫುಲ್ಲರ್‌ಟನ್ ಇಂಡಿಯಾ ಕ್ರೆಡಿಟ್ ಕಂಪನಿ ಲಿಮಿಟೆಡ್ ಗಾಗಿ<br>ಅಧಿಕೃತ ಸಹಿದಾರನ ಹೆಸರು:<br>.................................................................... | | ☒<br>.......................................<br>(ಸಹಿ) |

# ಸಾಲದ ಒಪ್ಪಂದಕ್ಕೆ
# ಸಾಲ ಸಾರಾಂಶ ಅನುಬಂಧ

ಈ ಸಾಲದ ಸಾರಾಂಶ ಅನುಬಂಧವು, ದಿನಾಂಕ ________________________ ರಂದು ಈ ದಾಖಲೆಯಲ್ಲಿ ಹೆಸರಿಸಲಾದ ಸಾಲಗಾರ(ರು) ಮತ್ತು ಫುಲ್ಲರ್ಟನ್ ಇಂಡಿಯಾ ಕ್ರೆಡಿಟ್ ಕಂಪನಿ ಲಿಮಿಟೆಡ್ ನಡುವೆ ಆದ ಸಾಲದ ಅವಿಭಾಜ್ಯ ಅಂಗವಾಗಿದೆ. (ಸಾಲದ ಒಪ್ಪಂದ) ಮತ್ತು ಇದನ್ನು ಸಾಲದ ಒಪ್ಪಂದದ ಜತೆ ಸೇರಿಸಿ ಓದಲಾಗುತ್ತದೆ.

## DESCRIPTION OF THE LOAN FACILITY

| ಕ್ರ.ಸಂ | ವಿವರಗಳು | | ಮಾಹಿತಿಗಳು |
|---|---|---|---|
| 1 | ಅರ್ಜಿ ಉಲ್ಲೇಖ ಸಂಖ್ಯೆ/ಸಾಲದ ಖಾತೆ ಸಂಖ್ಯೆ | : | |
| 2 | ಎಫ್‌ಐಸಿಸಿಎಲ್ ಶಾಖಾ ಕಚೇರಿ ವಿಳಾಸ | : | |
| 3 | ಸಾಲಗಾರನ(ರ) ಹಾಗೂ ಸಹ ಸಾಲಗಾರನ(ರ) ಹೆಸರು ಮತ್ತು ವಿಳಾಸ | :<br>:<br>:<br>: | ಹೆಸರು : ________<br>ವಿಳಾಸ : ________<br>ಹೆಸರು : ________<br>ವಿಳಾಸ : ________ ________ |
| 4 | ಸಾಲದ ಮೊತ್ತ | : | ರೂಪಾಯಿ ________________/-<br>(ವಿರೂಪಾಯಿಗಳು________________ಮಾತ್ರ) |
| 5 | ಬಡ್ಡಿದರ | : | __________% ಪ್ರತಿ ವರ್ಷಕ್ಕೆ ಉಳಿಕೆ ತಗ್ಗಿಸುವ ಆಧಾರದಲ್ಲಿ (ಸ್ಥಿರ ದರ) |
| 6 | ಸಾಲದ ಅವಧಿ | : | _________ ತಿಂಗಳುಗಳು |
| 7 | ಹೆಚ್ಚುವರಿ ಬಡ್ಡಿ (ಪಾವತಿ ಮಾಡದಿದ್ದರೆ ಅನ್ವಯವಾಗುವುದು) | : | ಬಾಕಿ ಇರುವ ಅಸಲಿನ ಮೊತ್ತದ ಮೇಲೆ ಪ್ರತಿ ತಿಂಗಳು 0.75% ಮೀರದ ಮೊತ್ತ (ಸೊನ್ನೆ ಬಿಂದು ಏಳು ಐದು ಶೇಕಡ) |
| 8 | ದಾಖಲೀಕರಣ ಶುಲ್ಕ/ದರಗಳು | : | ಇಎಂಐ ಪೂರ್ವ ಬಡ್ಡಿ/ಸ್ಟಾಂಪ್ ಶುಲ್ಕ ಸೇರಿ ರೂ. ____________/- ಮೀರಿದ ಮೊತ್ತ |
| 9 | ತೆರಿಗೆಗಳು ಹಾಗೂ ಲೆವಿಗಳು | : | ಏಕಪ್ರಕಾರವಾಗಿ ಅನ್ವಯವಾಗಬಹುದಾದಂತೆ ಸೇವಾ ತೆರಿಗೆ ಹಾಗೂ ಸೆಸ್ ಮಿತಿ ರಹಿತವಾಗಿ ಈ ಮೇಲೆ ಅಥವಾ ಸಾಲದ ಒಪ್ಪಂದದಲ್ಲಿ ಎಲ್ಲಿಯಾದರೂ ಸೂಚಿಸಿರುವ ಎಲ್ಲ ಶುಲ್ಕಗಳು ಎಲ್ಲ ತೆರಿಗೆಗಳು ಹಾಗೂ ಶಾಸನೋಕ್ತ ಲೆವಿಗಳಿಂದ ಹೊರತಾಗಿರುತ್ತವೆ. |

## ಮರುಪಾವತಿ ಅನುಬಂಧ

| ಕಟ್ಟಬೇಕಾದ ಸಮಾನ ಮಾಸಿಕ ಕಂತಿನ (ಇಎಂಐ) | ಸಂಖ್ಯೆ ಮೊದಲ ಇಎಂಐ ಆರಂಭದ ದಿನಾಂಕ | ಕೊನೆಯ ಇಎಂಐ ಪಾಯಿದೆ ದಿನಾಂಕ |
|---|---|---|
| | | |
| ಕಂತಿನ ಸಂಖ್ಯೆ | ಪ್ರತಿ ಇಎಂಐ ವಾಯಿದೆ ದಿನಾಂಕ | ಇಎಂಐ |
| ಮೊದಲಿಂದ ____________ ಕಂತು | | ರೂಪಾಯಿ ____________________/- |
| __________ ರಿಂದ _________ ಕಂತು | | ರೂಪಾಯಿ ____________________/- |
| ಮಧ್ಯಸ್ಥಿಕೆ ಹಾಗೂ ನ್ಯಾಯವ್ಯಾಪ್ತಿ ಸ್ಥಳ | | |

| ಸಾಲಗಾರ (ರಿಗೆ) ನಿಗೆ | |
|---|---|
| ಸಾಲಗಾರನ ಹೆಸರು:<br>...........................................................<br>ಅಕೃತ ಸಹಿದಾರನ ಹೆಸರು (ಮಾಲೀಕತ್ವ ಸಹಭಾಗಿತ್ವ ಹಾಗೂ ಕಂಪನಿಗಳಿಗೆ)<br>........................................................................ | ...................................<br>(ಸಹಿ) |
| ಸಹ ಸಾಲಗಾರನ ಹೆಸರು:<br>...........................................................<br>ಅಕೃತ ಸಹಿದಾರನ ಹೆಸರು (ಮಾಲೀಕತ್ವ ಸಹಭಾಗಿತ್ವ ಹಾಗೂ ಕಂಪನಿಗಳಿಗೆ)<br>........................................................................ | ...................................<br>(ಸಹಿ) |
| ಫುಲ್ಲರ್‌ಟನ್ ಇಂಡಿಯಾ ಕ್ರೆಡಿಟ್ ಕಂಪನಿ ಲಿಮಿಟೆಡ್ ಗಾಗಿ<br>ಅಕೃತ ಸಹಿದಾರನ ಹೆಸರು:<br>........................................................................ | ...................................<br>(ಸಹಿ) |

## ಶುಲ್ಕಗಳ ಪಟ್ಟಿ

| | | | |
|---|---|---|---|
| 1 | ಚೆಕ್/ನಗದು ಸಂಗ್ರಹ<br>(ಪ್ರತಿ ಸಂಗ್ರಹ) | : | 300/– ರೂಪಾಯಿ ಮೀರದ ಮೊತ್ತ |
| 2 | ಇಸಿಎಸ್ ಜತೆ ಮುಂದಿನ ದಿನಾಂಕದ ಚೆಕ್ಕುಗಳ ಬದಲಿಗೆ ವಿನಿಮಯ ಶುಲ್ಕಗಳು (ಪ್ರತಿ ಸಂದರ್ಭ) | : | 500/– ರೂಪಾಯಿ ಮೀರದ ಮೊತ್ತ |
| 3 | ಇಸಿಎಸ್ ಗೆ ಬದಲಿ ಬ್ಯಾಂಕಿಗಾಗಿ ವಿನಿಮಯ ಶುಲ್ಕಗಳು<br>(ಪ್ರತಿ ಸಂದರ್ಭ) | : | 500/– ರೂಪಾಯಿ ಮೀರದ ಮೊತ್ತ |
| 4 | ಸಾಲ ರದ್ದತಿ ಶುಲ್ಕಗಳು<br>(ಮೊದಲ ಇಎಂಐ ಮುನ್ನ ರದ್ದಾದ ಸಾಲ) | : | 1000/– ರೂಪಾಯಿ ಮೀರದ ಮೊತ್ತ |
| 5 | ಚೆಕ್/ಇಸಿಎಸ್ ವಾಪಸಾತಿ ಶುಲ್ಕಗಳು<br>(ಪ್ರತಿ ಚೆಕ್ ವಾಪಸಾತಿ/ಪ್ರತಿ ಇಸಿಎಸ್ ಸಲ್ಲಿಕೆ) | : | 30/– ರೂಪಾಯಿ ಮೀರದ ಮೊತ್ತ |
| 6 | ಪೂರ್ವ ಪಾವತಿ ಶುಲ್ಕಗಳು | : | (ಎ) ಸಾಲದ ಭಾಗಶಃ ಪೂರ್ವಪಾವತಿಗೆ ಅವಕಾಶ ಇಲ್ಲ.<br>(ಬಿ) ಸಂಪೂರ್ಣ ಸಾಲವನ್ನು ಬಾಕಿ ಬಡ್ಡಿ ಮೊತ್ತದೊಂದಿಗೆ ಪೂರ್ವಪಾವತಿ ಮಾಡಿದ ಸಂದರ್ಭದಲ್ಲಿ:<br>• ಒಪ್ಪಂದ ದಿನಾಂಕದಿಂದ 0 ರಿಂದ 17 ತಿಂಗಳುಗಳು : ಪೂರ್ವಪಾವತಿ ದಿನಾಂಕದಂದು ಬಾಕಿ ಇರುವ ಸಾಲದ ಅಸಲು ಮೊತ್ತದ 7%;<br>• ಒಪ್ಪಂದ ದಿನಾಂಕದಿಂದ 18ರಿಂದ 23 ತಿಂಗಳುಗಳು : ಪೂರ್ವಪಾವತಿ ದಿನಾಂಕದಂದು ಬಾಕಿ ಇರುವ ಸಾಲದ ಅಸಲು ಮೊತ್ತದ 5%<br>• ಒಪ್ಪಂದ ದಿನಾಂಕದಿಂದ 24ರಿಂದ 35 ತಿಂಗಳುಗಳು : ಪೂರ್ವಪಾವತಿ ದಿನಾಂಕದಂದು ಬಾಕಿ ಇರುವ ಸಾಲದ ಅಸಲು ಮೊತ್ತದ 3%<br>ಅಥವಾ ಎಫ್ಐಸಿಸಿಎಲ್ ಕಾಲದಿಂದ ಕಾಲಕ್ಕೆ ನಿರ್ದಿಷ್ಟಪಡಿಸಬಹುದಾದಂತೆ ಇಂತಹ ಇತರ ಮೊತ್ತ.<br>(ಸಿ) ಒಪ್ಪಂದ ದಿನಾಂಕದಿಒಂದ 36 ತಿಂಗಳುಗಳ ಬಳಿಕ ಪೂರ್ವಪಾವತಿ ಮಾಡುವಾಗ ಪೂರ್ವಪಾವತಿ ಶುಲ್ಕಗಳು ಅನ್ವಯವಾಗುವುದಿಲ್ಲ. |
| 7 | ಮರುಪಾವತಿಗೆ ಪ್ರಾಸೆಸಿಂಗ್ ಶುಲ್ಕ | : | 250/–ರೂಪಾಯಿ ಮೀರದ ಮೊತ್ತ |

ಗ್ರಾಹಕನ ಹೆಸರು:
.............................................................................. ........................................... ☒
(ಸಹಿ)

ಸಾಲಗಾರ ಮತ್ತು ಸಹ ಸಾಲಗಾರ ಸಹಿ ಮಾಡಬೇಕು

## ಡಿಮಾಂಡ್ ಪ್ರಾಮಿಸರಿ ನೋಟ್

ದಿನಾಂಕ: ____________________

ಸ್ಥಳ : ____________________

ಆಗ್ರಹದ ಮೇಲೆ ನಾನು/ನಾವು ........................................................................................................................................ ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ಮತ್ತು ಷರತ್ತುರಹಿತವಾಗಿ ಮೇಫ್ ಟವರ್ಸ್, 3ನೇ ಮಹಡಿ, ಹಳೆಯ ನಂ.307, ಹೊಸ ನಂ.165, ಪೂನಾಮಲ್ಲಿ ಹೈ ರೋಡ್, ಮದುರವೊಯಲ್, ಚೆನ್ನೈ–600095, ತಮಿಳುನಾಡು ಇಲ್ಲಿ ನೋಂದಾಯಿತ ಕಚೇರಿ ಹೊಂದಿರುವ ಫುಲ್ಲರ್ಟನ್ ಇಂಡಿಯಾ ಕ್ರೆಡಿಟ್ ಕಂಪನಿ ಲಿಮಿಟೆಡ್‌ಗೆ ಅಥವಾ ಆದೇಶದಂತೆ, ರೂಪಾಯಿಗಳನ್ನು ☒ (ರೂಪಾಯಿಗಳು ...................... ಮಾತ್ರ) ಅದಕ್ಕೆ ಸಂಬಂಧಿಸಿದ ಬಡ್ಡಿಯನ್ನು ಮಾಸಿಕ ಬಾಕಿ ಮೇಲೆ ಲೆಕ್ಕ ಹಾಕಿ ಪ್ರತಿ ವರ್ಷ ...................... % ಬಡ್ಡಿ ದರದಲ್ಲಿ ಪಾವತಿಸುವುದಕ್ಕೆ ಭರವಸೆ ನೀಡುತ್ತೇನೆ/ನೀಡುತ್ತೇವೆ. ಹಣಪಾವತಿಗಾಗಿ ಪ್ರಸ್ತುತಪಡಿಸುವುದು ಮತ್ತು ನೋಟಿಂಗ್ ಮತ್ತು ನೋಟ್‌ಗೆ ವಿರೋಧ ಮಾಡುವುದನ್ನು ಷರತ್ತುರಹಿತವಾಗಿ ಹಾಗೂ ಹಿಂತೆಗೆದುಕೊಳ್ಳಲಾಗದಂತೆ ಮನ್ನಾ ಮಾಡಲಾಗಿದೆ.

ಒಬ್ಬರಿಗಿಂತ ಹೆಚ್ಚು ಜನ ಸಹಿ ಮಾಡುವವರು ಇರುವಲ್ಲಿ ಪ್ರತಿಯೊಬ್ಬ ಸಹಿದಾರನ ಹೊಣೆಗಾರಿಕೆಯು ಜಂಟಿಯಾಗಿರುತ್ತದೆ ಮತ್ತು ಪ್ರತ್ಯೇಕವಾಗಿರುತ್ತದೆ.

| | |
|---|---|
| ಸಾಲಗಾರನ ಹೆಸರು<br>______________________________ | ರೂ. 1/– ರ ರೆವನ್ಯೂ ಸ್ಟಾಂಪ್ ಅನ್ನು ಇಲ್ಲಿ ಹಚ್ಚಿರಿ (x)<br>ಸಾಲಗಾರ |
| ಸಹ ಸಾಲಗಾರನ ಹೆಸರು<br>______________________________ | ರೂ. 1/– ರ ರೆವನ್ಯೂ ಸ್ಟಾಂಪ್ ಅನ್ನು ಇಲ್ಲಿ ಹಚ್ಚಿರಿ (x)<br>ಸಹ ಸಾಲಗಾರ |
| ಸಹ ಸಾಲಗಾರನ ಹೆಸರು<br>______________________________ | ರೂ. 1/– ರ ರೆವನ್ಯೂ ಸ್ಟಾಂಪ್ ಅನ್ನು ಇಲ್ಲಿ ಹಚ್ಚಿರಿ (x)<br>ಸಹ ಸಾಲಗಾರ |
| ಸಹ ಸಾಲಗಾರನ ಹೆಸರು<br>______________________________ | ರೂ. 1/– ರ ರೆವನ್ಯೂ ಸ್ಟಾಂಪ್ ಅನ್ನು ಇಲ್ಲಿ ಹಚ್ಚಿರಿ (x)<br>ಸಹ ಸಾಲಗಾರ |

(ಗಮನಿಸಿ–(x) ಸಹಿಯು ರೆವೆನ್ಯೂ ಸ್ಟಾಂಪನ್ನು ಮೇಲ್ಗಡೆಯಲ್ಲಿ ಇರಬೇಕು)

# ಸಾಲದ ಮೊತ್ತ ನೀಡಿಕೆಗೆ ಸೂಚನೆಗಳು

ದಿನಾಂಕ :

ಇವರಿಗೆ
ಫುಲ್ಲರ್‌ಟನ್ ಇಂಡಿಯಾ ಕ್ರೆಡಿಟ್ ಕಂಪನಿ ಲಿಮಿಟೆಡ್
. . . . . . . . . . . . . . . . . . . . . . . . . . . . . . . . . . . . . . . . .
. . . . . . . . . . . . . . . . . . . . . . . . . . . . . . . . . . . . . . . . .
. . . . . . . . . . . . . . . . . . . . . . . . . . . . . . . . . . . . . . . . .
. . . . . . . . . . . . . . . . . . . . . . . . . . . . . . . . . . . . . . . . .

ವಿಷಯ: ಬಟವಾಡೆಗೆ ಆಕಾರ

ಮಾನ್ಯರೇ,

........................................................................................ ಇವರಿಗೆ ಸಾಲ ಸೌಲಭ್ಯ ಮಂಜೂರಾತಿ ಅರ್ಜಿಯನ್ನು ಉಲ್ಲೇಖಿಸಿ ದಯವಿಟ್ಟು ಸಾಲ ನೀಡಿಕೆಯ ಚೆಕ್ ಅನ್ನು ಇಲ್ಲಿಂದ ಮುಂದೆ ಕಾಣಿಸುವ ಹೆಸರಿನಲ್ಲಿ ಮತ್ತು ರೀತಿಯಲ್ಲಿ ತಯಾರಿಸಿ:

| ಪಾವತಿಸುವವರ ಹೆಸರು | ಮೊತ್ತ (ರೂಪಾಯಿ) |
|---|---|
| | |
| | |
| | |
| | |
| | |
| | |
| | |
| | |

☒

ಮೇಲಿನ ಪಾವತಿದಾರರ ಪರವಾಗಿ ಸಾಲದ ಮೊತ್ತವು ಸಾಲ ಸೌಲಭ್ಯಕ್ಕೆ ಸಂಬಂಸಿದಂತೆ ನೀಡುವುದು ನನ್ನ/ನಮ್ಮ ಹೊಣೆಗಾರಿಕೆಯನ್ನು ಪ್ರಭಾವಿಸಬಾರದು. ಮೇಲಿನ ಪಾವತಿದಾರರಿಗೆ ಸಾಲ ನೀಡಿಕೆಯನ್ನು ಸಾಲ ಮಂಜೂರು ಮಾಡಿರುವುದು ಮತ್ತು ನನ್ನಿಂದ/ನಮ್ಮಿಂದ ಪಡೆದಿರುವ ಸಾಲ ಎಂದು ಭಾವಿಸಬೇಕು.
ಧನ್ಯವಾದಗಳು

ಸಾಲಗಾರನ ಹೆಸರು: ................................................................................ . . . . . . . . . . . . . . . . . . . . . . . . . . . . . . . . . . . . . . . . . ಸಹಿ ☒

ಅಕೃತ ಸಹಿದಾರನ ಹೆಸರು (ಮಾಲೀಕತ್ವ, ಸಹಭಾಗಿತ್ವ ಹಾಗೂ ಕಂಪನಿಗಳಿಗೆ)

........................................................................................................................

ಸಹ ಸಾಲಗಾರನ ಹೆಸರು: ............................................................................. . . . . . . . . . . . . . . . . . . . . . . . . . . . . . . . . . . . . . . . . . ಸಹಿ ☒

ಅಕೃತ ಸಹಿದಾರನ ಹೆಸರು (ಮಾಲೀಕತ್ವ, ಸಹಭಾಗಿತ್ವ ಹಾಗೂ ಕಂಪನಿಗಳಿಗೆ)

........................................................................................................................

ದೃಢೀಕರಣ
ನಾನು/ನಾವು ಕೆಳಗಿನ ಮೊತ್ತದ ಚೆಕ್ ಗಳನ್ನು ನನಗೆ/ನಮಗೆ ಸಾಲದ ಮೊತ್ತ ನೀಡಿಕೆಯ ಅಡಿಯಲ್ಲಿ ಕೆಳಗಿನ ವಿವರಣೆಯಂತೆ ನೀಡಲಾಗಿದೆ ಎಂದು ಒಪ್ಪಿಕೊಳ್ಳುತ್ತೇನೆ/ತ್ತೇವೆ.

| ಚೆಕ್ ಸಂಖ್ಯ | ಮೊತ್ತ | ದಿನಾಂಕ | ಬ್ಯಾಂಕ್ ಹೆಸರು | ಪರವಾಗಿ |
|---|---|---|---|---|
| | | | | |
| | | | | |
| | | | | |
| | | | | |

☒

ಧನ್ಯವಾದಗಳು

ಸಾಲಗಾರನ ಹೆಸರು : ................................................................................ . . . . . . . . . . . . . . . . . . . . . . . . . . . . . . . . . . . . . . . . . (ಸಹಿ) ☒

ಅಕೃತ ಸಹಿದಾರನ ಹೆಸರು (ಮಾಲೀಕತ್ವ, ಸಹಭಾಗಿತ್ವ ಹಾಗೂ ಕಂಪನಿಗಳಿಗೆ)

........................................................................................................................

ಸಹ ಸಾಲಗಾರನ ಹೆಸರು : ............................................................................ . . . . . . . . . . . . . . . . . . . . . . . . . . . . . . . . . . . . . . . . . (ಸಹಿ) ☒

ಅಕೃತ ಸಹಿದಾರನ ಹೆಸರು (ಮಾಲೀಕತ್ವ, ಸಹಭಾಗಿತ್ವ ಹಾಗೂ ಕಂಪನಿಗಳಿಗೆ)

........................................................................................................................

# ರಾಷ್ಟ್ರೀಯ ವಿದ್ಯುನ್ಮಾನ ಹಣ ವರ್ಗಾವಣೆ ಮೂಲಕ ಸಾಲ ನೀಡಿಕೆಗೆ ಅರ್ಜಿ ನಮೂನೆ

ದಿನಾಂಕ: [ ]

ಇವರಿಗೆ
ಫುಲ್ಲರ್‌ಟನ್ ಇಂಡಿಯಾ ಕ್ರೆಡಿಟ್ ಕಂಪನಿ ಲಿಮಿಟೆಡ್
_______________________________
_______________________________
_______________________________

ವಿಷಯ: ರಾಷ್ಟ್ರೀಯ ವಿದ್ಯುನ್ಮಾನ ಹಣ ವರ್ಗಾವಣೆ ಯೋಜನೆ ಅಡಿ ವಿದ್ಯುನ್ಮಾನ ಹಣ ವರ್ಗಾವಣೆ ಮುಖೇನ ಸಾಲ ನೀಡುವುದು

ಉಲ್ಲೇಖ: ಸಾಲದ ಅರ್ಜಿ ಉಲ್ಲೇಖ ಸಂಖ್ಯೆ :[ ]
ಸಾಲದ ಖಾತೆ ಸಂಖ್ಯೆ :[ ]

ಮಾನ್ಯರೇ,

ನನ್ನ/ನಮ್ಮ ಸಾಲದ ಅರ್ಜಿಯನ್ನು ಉಲ್ಲೇಖಿಸಿ, ನಾನು/ನಾವು ಈ ಮೂಲಕ ಷರತ್ತುರಹಿತವಾಗಿ ಫುಲ್ಲರ್‌ಟನ್ ಇಂಡಿಯಾ ಕ್ರೆಡಿಟ್ ಕಂಪನಿ ಲಿಮಿಟೆಡ್ (ಫುಲ್ಲರ್‌ಟನ್ ಇಂಡಿಯಾ) ಸೂಚಿಸುವುದೇನೆಂದರೆ ಮಂಜೂರು ಮಾಡಿರುವ ರೂ. ____________________/– ಸಾಲ ಮೊತ್ತವನ್ನು (____________________ ____________ರೂಪಾಯಿಗಳು ಮಾತ್ರ) ನೇರವಾಗಿ (ದಾಖಲೀಕರಣ ಶುಲ್ಕಗಳು ಹಾಗೂ ಪ್ರಾಸೆಸಿಂಗ್ ಶುಲ್ಕಗಳನ್ನು ಕಡಿತಗೊಳಿಸಿದ ಬಳಿಕ) ಈ ಮುಂದಿನ ವಿವರಗಳ ಪ್ರಕಾರ ಸಂದಾಯ ಮಾಡಬೇಕು:–

ಫಲಾನುಭವಿಯ ವಿವರಗಳು

| | | |
|---|---|---|
| ಫಲಾನುಭವಿಯ ಬ್ಯಾಂಕ್ ಹೆಸರು | : | |
| ಫಲಾನುಭವಿಯ ಬ್ಯಾಂಕ್ ಎ/ಸಿ ಹೆಸರು | : | |
| ಫಲಾನುಭವಿಯ ಬ್ಯಾಂಕ್ ಎ/ಸಿ # | : | |
| ಫಲಾನುಭವಿಯ ಬ್ಯಾಂಕ್ ಖಾತೆ ಸ್ವರೂಪ | : | ☐ ಉಳಿತಾಯ ☐ ಚಾಲ್ತಿ ☐ ನಗದು ಸಾಲ |
| ಫಲಾನುಭವಿಯ ಬ್ಯಾಂಕ್ ಪಾವತಿಮಾಡುವ ಸ್ಥಳ | : | |
| ಫಲಾನುಭವಿಯ ಬ್ಯಾಂಕ್ ಶಾಖೆಯ ಐಎಫ್‌ಎಸ್ ಸಿ ಕೋಡ್ | : | |
| ಎಂಐಸಿಆರ್ ಕೋಡ್ | : | |
| ಸಂದಾಯವಾಗಬೇಕಾದ ಮೊತ್ತ | : | |

☒

ನಾನು/ನಾವು ಈ ಮೂಲಕ ಘೋಷಿಸುವುದು:

- ಮೇಲೆ ನೀಡಿರುವ ವಿವರಗಳು ಸತ್ಯಯುತವಾಗಿವೆ, ಸರಿಯಾಗಿವೆ ಮತ್ತು ನನಗೆ/ನಮಗೆ ತಿಳಿದಿರುವಂತೆ ಸಂಪೂರ್ಣವಾಗಿವೆ. ಹಣಪಾವತಿಯ ಸೂಚನೆಯಲ್ಲಿ ನೀಡಿರುವ ವಿವರಗಳ ನಿಖರತೆಗಾಗಿ ನಾನು/ನಾವು ಹೊಣೆಯಾಗಿರುತ್ತೇವೆ.
- ನಾನು/ನಾವು ಒಂದೊಮ್ಮೆ ಹಣಪಾವತಿಯ ಸೂಚನೆಯನ್ನು ಎಫ್‌ಐಸಿಸಿಎಲ್ ಉತ್ತಮ ವಿಶ್ವಾಸದಲ್ಲಿ ಮತ್ತು ವಿದ್ಯುನ್ಮಾನ ಹಣ ವರ್ಗಾವಣೆ ಸೂಚನೆಗಳಿಗೆ ಅನುಸಾರ ನೀಡಿದ್ದಲ್ಲಿ ನಾನು/ನಾವು ಎಫ್‌ಐಸಿಸಿಎಲ್ ನೀಡುವ ಯಾವುದೇ ಹಣಪಾವತಿಯ ಸೂಚನೆಗೆ ಬದ್ಧರಾಗಿರಬೇಕು.
- ಮೇಲಿನ ಫಲಾನುಭವಿಗಳಿಗೆ ಸಾಲ ನೀಡಿಕೆಯನ್ನು ಸಾಲ ಮಂಜೂರು ಮಾಡಿರುವುದು ಮತ್ತು ನನ್ನಿಂದ/ನಮ್ಮಿಂದ ಪಡೆದಿರುವ ಸಾಲ ಎಂದು ಭಾವಿಸಬೇಕು. ಸಾಲ ಸೌಲಭ್ಯಕ್ಕೆ ಸಂಬಂಧಿಸಿದಂತೆ ಮೇಲಿನ ಫಲಾನುಭವಿಗಳ ಪರವಾಗಿ ಸಾಲದ ಮೊತ್ತದ ಬಟವಾಡೆಯು ನನ್ನ/ನಮ್ಮ ಹೊಣೆಗಾರಿಕೆಯ ಮೇಲೆ ಪರಿಣಾಮ ಬೀರಬಾರದು.
- ಅಪೂರ್ಣ ಮಾಹಿತಿ, ರವಾನೆಯಲ್ಲಿ ವಿಳಂಬ, ರವಾನೆ ಅಥವಾ ಎಲೆಕ್ಟ್ರಾನಿಕ್ ಸಂದೇಶ ರವಾನೆಯಿಲ್ಲದಿರುವಿಕೆ ಅಥವಾ ಯಾವುದೇ ತಪ್ಪು ರವಾನೆಯಲ್ಲಿ ದೋಷ ಅಥವಾ ವ್ಯತ್ಯಯ ಅಥವಾ ರವಾನೆ ಅಥವಾ ನಿಯಂತ್ರಣದಲ್ಲಿ ಇಲ್ಲದೇ ಇರುವ ಯಾವುದೇ ಕ್ರಿಯೆ ಅಥವಾ ಘಟನೆಯಿಂದಾಗಿ ಉಂಟಾಗುವ ಯಾವುದೇ ಹಾನಿ ಅಥವಾ ತೊಂದರೆಗೆ ಫುಲ್ಲರ್‌ಟನ್ ಇಂಡಿಯಾ ಹೊಣೆಯಾಗಿರುವುದಿಲ್ಲ, ಮೇಲೆ ನೀಡಿರುವುದನ್ನು ಪರಿಗಣಿಸದೇ ಹಣ ವರ್ಗಾವಣೆಯಲ್ಲಿ ಯಾವುದೇ ವಿಳಂಬ ಅಥವಾ ಎಫ್‌ಐಸಿಸಿಎಲ್ನ ಅಲಕ್ಷ್ಯದಿಂದಾಗಿ ಉಂಟಾಗಿರುವ ಹಣಪಾವತಿಯ ಸೂಚನೆಯ ಪ್ರಕಾರ ಹಣ ವರ್ಗಾವಣೆಯಲ್ಲಿ ಉಂಟಾದ ಯಾವುದೇ ದೋಷದಿಂದಾಗಿ ನಷ್ಟ ಉಂಟಾದಲ್ಲಿ, ಎಫ್‌ಐಸಿಸಿಎಲ್ನ ಹೊಣೆಗಾರಿಕೆಯು ಬ್ಯಾಂಕ್ ದರದಲ್ಲಿ ಹಾಗೆ ವಿಳಂಬವಾದ ಹಣಪಾವತಿಯ ಅವಗೆ ಬಡ್ಡಿಯನ್ನು ಪಾವತಿಸುವುದಕ್ಕೆ ಸೀಮಿತವಾಗಿರುತ್ತದೆ.
- ಕ್ರೆಡಿಟ್ ಆಗದೇ ಇರುವುದು ಅಥವಾ ಈ ಅರ್ಜಿ ನಮೂನೆಯಲ್ಲಿ ನಾನು/ನಾವು ನೀಡಿದ ತಪ್ಪು ಮಾಹಿತಿಯಿಂದಾಗಿ ತಪ್ಪಾದ ಫಲಾನುಭವಿಗೆ ಕ್ರೆಡಿಟ್ ಮಾಡಿದಲ್ಲಿ ಆದಕ್ಕೆ ಎಫ್‌ಐಸಿಸಿಎಲ್ ಹೊಣೆಯಾಗಿರುವುದಿಲ್ಲ.
- ಫಲಾನುಭವಿ ಬ್ಯಾಂಕ್ ಒಳಬರುವ ಹಣಪಾವತಿಯ ಮೇಲೆ ಶುಲ್ಕಗಳನ್ನು ವಿಸಬಹುದು ಮತ್ತು ಹಾಗೆ ಹಣಪಾವತಿ ಪಡೆದ ಖಾತೆಯಿಂದ ಅದನ್ನು ಕಳೆಯಬಹುದು.

ಎಲ್ಲ ರಾಷ್ಟ್ರೀಯ ವಿದ್ಯುನ್ಮಾನ ಹಣ ವರ್ಗಾವಣೆ (ಎನ್ಇಎಫ್‌ಟಿ) ಸೂಚನೆಗಳನ್ನು ಹಿಂತೆಗೆದುಕೊಳ್ಳಲಾಗುವುದಿಲ್ಲ ಮತ್ತು ಎನ್ಇಎಫ್‌ಟಿಯಿಂದ ಹಣಪಾವತಿಯನ್ನು ತಡೆಯುವುದಕ್ಕೆ ಸೂಚನೆಯನ್ನು ನೀಡುವ ಯಾವುದೇ ಸೌಲಭ್ಯ ಇರುವುದಿಲ್ಲ ಎನ್ನುವುದು ನಾನು ತಿಳಿಯುವೆ.

ಧನ್ಯವಾದಗಳು

ನಿಮ್ಮ ವಿಶ್ವಾಸಿ

| ಸಾಲಗಾರ (ರು) ಹಾಗೂ ಸಹಸಾಲಗಾರರ ಹೆಸರು | | ಸಹಿ |
|---|---|---|
| ಹೆಸರು : ........................................ | | .............................. ☒<br>(ಸಹಿ) |
| ಹೆಸರು : ........................................ | | .............................. ☒<br>(ಸಹಿ) |

# ಅತಿ ಮುಖ್ಯವಾದ ನಿಯಮಗಳು ಹಾಗೂ ಷರತ್ತುಗಳು

## ಸಹಿ ಹಾಕುವ ಮುನ್ನ ದಯವಿಟ್ಟು ಎಚ್ಚರಿಕೆಯಿಂದ ಓದಿ

### ಅಂಗೀಕಾರದ ನಮೂನೆ

ದಿನಾಂಕ: [ ]

ನಾನು/ನಾವು ಅರ್ಜಿ ಸಂಖ್ಯೆ.............................................. ಉಲ್ಲೇಖಿಸುತ್ತೇವೆ ಮತ್ತು ಸಾಲ ಒಪ್ಪಂದವು ಫುಲ್ಲರ್‌ಟನ್ ಇಂಡಿಯಾ ಕ್ರೆಡಿಟ್ ಕಂಪನಿ ಲಿಮಿಟೆಡ್ (ಎಫ್‌ಐಸಿಸಿಎಲ್) ಪರವಾಗಿ ................................ ದಿನಾಂಕದಂದು ನನ್ನಿಂದ/ನಮ್ಮಿಂದ ಜಾರಿಯಾಗಿದೆ. ನನಗೆ/ನಮಗೆ ಈ ಮುಂದಿನ ಮಾಹಿತಿಗಳು ಲಭ್ಯವಿವೆ ಮತ್ತು ಅದನ್ನು ನಾವು ಒಪ್ಪಿಕೊಳ್ಳುತ್ತೇವೆ ಹಾಗೂ ಮೇಲೆ ಹೇಳಿದ ಒಪ್ಪಂದವನ್ನು ಈ ಪ್ರಕಾರ ಪೂರ್ಣಗೊಳಿಸಲಾಗಿದೆ:

| | | |
|---|---|---|
| ಸಾಲದ ಮೊತ್ತ | : | ರೂಪಾಯಿ |
| ತಗ್ಗಿದ ಉಳಿಕೆ ಮೇಲೆ ಬಡ್ಡಿ ದರ (ಪ್ರತಿ ವರ್ಷ %) | : | |
| ಕರೆಸ್ಪಾಂಡಿಂಗ್ ಸ್ಥಿರ ಬಡ್ಡಿ ದರ (ಪ್ರತಿ ವರ್ಷ %)* | : | |
| ತಿಂಗಳುಗಳಲ್ಲಿ ಸಾಲದ ಅವ | : | |
| ಮಾಸಿಕ ಕಂತಿನ ಮೊತ್ತ (ಇಎಂಐ) | : | ರೂಪಾಯಿ |
| ಒಟ್ಟು ಶುಲ್ಕಗಳು ( ಸಾಲದ ದಾಖಲೆ ಶುಲ್ಕಗಳು, ಪೂರ್ವ ಇಎಂಐ ಇದ್ದಲ್ಲಿ ಅವುಗಳ ಸಹಿತ) | : | ರೂಪಾಯಿ |
| ವಿಮಾ ಕಂತು ಶುಲ್ಕಗಳು | : | ರೂಪಾಯಿ |
| ಈಎಚ್‌ಒ ಶುಲ್ಕಗಳು | : | ರೂಪಾಯಿ |

*ಮೇಲೆ ಉಲ್ಲೇಖಿಸಿದ ಸ್ಥಿರ ಬಡ್ಡಿ ದರವು ವಿವರಣೆ ಉದ್ದೇಶದಿಂದ ಮಾತ್ರ ಕೂಡಿದೆ, ಮಾಸಿಕ ಉಳಿಕೆಯ ಜತೆಯೊಂದಿಗೆ ತಗ್ಗಿದ ಬಾಕಿ ಆಧಾರದಲ್ಲಿ ಸಾಲದ ಮೇಲೆ ಬಡ್ಡಿ ಹಾಕಲಾಗುತ್ತದೆ ಎನ್ನುವುದು ನನಗೆ/ನಮಗೆ ಗೊತ್ತಿದೆ.

ಸ್ಥಿರ ಬಡ್ಡಿ ದರವನ್ನು ಈ ಮುಂದಿನಂತೆ ಲೆಕ್ಕ ಹಾಕಲಾಗುತ್ತದೆ:

$$\text{ಬಡ್ಡಿ ದರ \%} = \frac{(\text{ಇಎಂಐ X ತಿಂಗಳಿನಲ್ಲಿ ಅವಧಿ}) - \text{ಅಸಲು X 100}}{\text{ಅಸಲು X ವರ್ಷಗಳಲ್ಲಿ ಅವಧಿ}}$$

ನಾನು/ನಾವು ಅನುಮೋದಿಸುವುದು:

- ಈ ಮೇಲಿನವು ಮೇಲೆ ಹೇಳಿದ ಸಾಲದ ಬಹಳ ಮುಖ್ಯ ನಿಯಮಗಳು, ಸಾಲದ ಒಪ್ಪಂದದಲ್ಲಿ ನಿರ್ದಿಷ್ಟಪಡಿಸಿದಂತೆ ಸಾಲದ ಇತರ ಎಲ್ಲ ನಿಯಮಗಳು ಹಾಗೂ ಷರತ್ತುಗಳು ಇರುತ್ತವೆ.
- ಯಾವುದೇ ಶುಲ್ಕಗಳ ಲೆವಿ ಮತ್ತು/ಅಥವಾ ಲೆವಿಯಲ್ಲಿನ ಬದಲಾವಣೆ ಅಥವಾ ಇಂತಹ ಲೆವಿಗಳ ಪರಿಚಯದ ಬಗ್ಗೆ ಪೂರ್ವಭಾವಿಯಾಗಿ ಅಥವಾ ಆ ನಂತರದಲ್ಲಿ ಎಫ್‌ಐಸಿಸಿಎಲ್ ಮಾಹಿತಿ ನೀಡುವುದು ಕಡ್ಡಾಯವಲ್ಲ ಎನ್ನುವ ಅಂಶ ನನಗೆ/ನಮಗೆ ಗೊತ್ತಿದೆ.
- ಬೇಪಾವತಿ ಸಂದರ್ಭದಲ್ಲಿ ಯಾವುದೇ ನೋಟಿಸ್ ಇಲ್ಲದೇ ಸೌಲಭ್ಯವನ್ನು ಸೇರಿಸುವ, ಆಳಿಸುವ, ವಾಪಸ್ ಪಡೆಯುವ ಅಥವಾ ಮೇಲೆ ಹೇಳಿದ ಯಾವುದೇ ನಿಯಮಗಳು ಹಾಗೂ ಷರತ್ತುಗಳನ್ನು ತಿದ್ದುಪಡಿ ಮಾಡುವ ಅಧಿಕಾರ ಎಫ್‌ಐಸಿಸಿಎಲ್‌ಗೆ ಇದೆ. ಅಲ್ಲದೇ ಇದಕ್ಕೆ ನಾನು/ನಾವು ಹೊಣೆ.
- ಸಂವಹನ ವಿಳಾಸ ಬದಲಾದಲ್ಲಿ, ಒಂದು ತಿಂಗಳ ಮುಂಚೆ ನಾನು/ನಾವು ಇದನ್ನು ಎಫ್‌ಐಸಿಸಿಎಲ್‌ಗೆ ತಿಳಿಸಬೇಕು.

ಸಾಲಗಾರ (ರ) ನ ಹೆಸರು : ………………………………………..

ಸಹಿ (ಗಳು) : ……………………………………………............

- ಈ ಮೇಲಿನ ದಾಖಲೆ ಖಾಲಿ ಇದ್ದಲ್ಲಿ ಅದರ ಮೇಲೆ ದಯವಿಟ್ಟು ಸಹಿ ಮಾಡಬೇಡಿ.
- ನಿಮ್ಮ ಸಾಲದ ಪ್ರಾಸೆಸಿಂಗ್‌ಗೆ ಯಾರಿಗೂ ಹಣ ನೀಡಬೇಡಿ. ಒಂದು ವೇಳೆ ನಿಮ್ಮನ್ನು ಕೇಳಿದ ಸಂದರ್ಭದಲ್ಲಿ ದಯವಿಟ್ಟು ನಿರಾಕರಿಸಿ ಮತ್ತು ನಿಮ್ಮ ಹತ್ತಿರದ ಎಫ್‌ಐಸಿಸಿಎಲ್ ಶಾಖೆಯನ್ನು ಸಂಪರ್ಕಿಸಿ.